ರಿಜಿಡ್ ಪಿ.ವಿ.ಸಿ.
ಶ್ರೀ ಕೃಷ್ಣ ಪೈಪ್
ಕರ್ಕಿ, ಹೆಮ್ಮಾಡಿ
ಕುಂದಾಪುರ Tq, ಉಡುಪಿ Dist,
Ph: (08254) 271261, 271361 (R), 264361, 264444 (Factory)

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಜನವರಿ 11, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

# ಯುವಜನತೆ ಸಂಶೋಧನೆಯಲ್ಲಿ ತೊಡಗಿ



ಸಹ್ಯಾದ್ರಿ ಸಮಾವೇಶ ಸಮಾರೋಪದಲ್ಲಿ ಗೌರವ್ ಗುಪ್ತ ಮಾತನಾಡಿದರು.

**ಗೌರವ್ ಗುಪ್ತ**

ಮಂಗಳೂರು, ಜ. 10: ಯುವಕ ಯುವತಿಯರು ಸಂಶೋಧನ ಕ್ಷೇತ್ರದಲ್ಲಿ ಹೆಚ್ಚು ತೊಡಗಿಸಿಕೊಂಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ರಾಜ್ಯ ಮಾಹಿತಿ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ವಳಚ್ಚಿಲ್‌ನಲ್ಲಿರುವ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ವಿಜ್ಞಾನ- ತಂತ್ರಜ್ಞಾನ- ಆಡಳಿತ ಕುರಿತ ಐದು ದಿನಗಳ ಕಾಲ ನಡೆದ ಸಹ್ಯಾದ್ರಿ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಬುಧವಾರ ಮಾತನಾಡಿದ ಅವರು, ಸಂಶೋಧನ ವಲಯಕ್ಕೆ ರಾಜ್ಯ ಸರಕಾರ ಹೆಚ್ಚಿನ ಮಹತ್ವ ನೀಡುತ್ತಿದೆ. ದೇಶೀಯವಾಗಿ ನಡೆಸಲು ಅಸಾಧ್ಯವಾದ ಸಂಶೋಧನೆಗಳನ್ನು ವಿದೇಶಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನಡೆಸಬೇಕಿದೆ ಎಂದರು.

ಬೆಂಗಳೂರು ಈ ಹಿಂದೆ ತಂತ್ರಜ್ಞಾನಗಳ ನಗರವಾಗಿತ್ತು. ವಿಜ್ಞಾನ ಕ್ಷೇತ್ರದ ಬೆಳವಣಿಗೆಗೆ ಮಂಗಳೂರಿನಲ್ಲಿಯೂ ವಿಪುಲ ಅವಕಾಶವಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಸಂಶೋಧನ ಕ್ಷೇತ್ರದ ಉಪಯೋಗಕ್ಕೆಂದು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಸಹಿತ ರಾಜ್ಯದಲ್ಲಿ ಒಟ್ಟು 20 ಇನ್‌ಕ್ಯುಬೇಶನ್ ಸೆಂಟರ್‌ಗಳನ್ನು ತೆರೆಯಲಾಗಿದೆ. ಇದರಿಂದ ಕರಾವಳಿಗರಿಗೆ ಹೆಚ್ಚಿನ ಸಹಾಯವಾಗಲಿದೆ. ನೀರಿನ ಮಟ್ಟ, ವಾಹನದಟ್ಟಣೆ, ಸಂಚಾರ ವ್ಯವಸ್ಥೆ, ಕೃಷಿ, ಆರೋಗ್ಯ ಸಮಸ್ಯೆ, ಶಿಕ್ಷಣ ಗುಣಮಟ್ಟ ಸುಧಾರಣೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಂಶೋಧನೆ ನಡೆಸಬೇಕಿದೆ ಎಂದು ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ರಸಾಯನಶಾಸ್ತ್ರ ನೊಬೆಲ್ ವಿಜೇತೆ ಎಡಾ ಇ. ಯೊನಾತ್ ಮಾತನಾಡಿ, ವಿಚಾರ ಸಂಕಿರಣದಲ್ಲಿ ಉತ್ತಮ ಅಂಶಗಳು ಚರ್ಚಿತವಾಗಿವೆ. ವಿದ್ಯಾರ್ಥಿಗಳು ಉತ್ತಮವಾಗಿ ಸಂವಾದ ನಡೆಸಿ ಜ್ಞಾನ ಪಡೆದುಕೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಸರ್ಜ್ ಹಾರೊಕಿ, ಕಂಪ್ಯೂಟರ್ ಸೈನ್ಸ್ ಕ್ಷೇತ್ರದಲ್ಲಿ ಟ್ಯೂರಿಂಗ್ ಪ್ರಶಸ್ತಿ ವಿಜೇತ ಜೋಸೆಫ್ ಸಿಫಾಕಿಸ್, ಸಹ್ಯಾದ್ರಿ ಕಾಲೇಜಿನ ಅಧ್ಯಕ್ಷ ಮಂಜುನಾಥ್ ಭಂಡಾರಿ, ಮಂಗಳೂರು ವಿ.ವಿ. ಉಪಕುಲಪತಿ ಪ್ರೊ। ಕೆ. ಬೈರಪ್ಪ, ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ। ಕರಣಮ್ ಉಮಾಮಹೇಶ್ವರ ರಾವ್, ಪ್ರಾಂಶುಪಾಲರಾದ ಉಮೇಶ್ ಭೂಷಿ, ನಿರ್ದೇಶಕ ಪ್ರೊ। ಡಿ.ಎಲ್. ಪ್ರಭಾಕರ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

## ನ್ಯೂ ಏಜ್ ಇನ್‌ಕ್ಯುಬೇಷನ್ ಸೆಂಟರ್

ರಾಜ್ಯ ಸರಕಾರ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗಳು ಮಂಗಳೂರು ವಲಯದಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ ಮೂಲ ಸೌಲಭ್ಯ ಕಲ್ಪಿಸುವ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ ಸೆಂಟರ್ ಸ್ಥಾಪನೆಗೆ ಅನುಮೋದನೆ ನೀಡಿವೆ.

ಈ ಇನ್‌ಕ್ಯುಬೇಶನ್ ಕೇಂದ್ರವು ಯುವ ಮನಸ್ಸುಗಳಿಗೆ ತಮ್ಮ ಸಂಶೋಧನೆಗಳನ್ನು ಕಾರ್ಯಗತಗೊಳಿಸಲು ಮೂಲಸೌಲಭ್ಯ ಒದಗಿಸುವ ಮೂಲಕ ಯಶಸ್ವಿ ಉದ್ಯಮಿಗಳಾಗಲು ಉತ್ತೇಜಿಸುತ್ತವೆ. ಸೂಕ್ತ ಸಲಹೆ, ಸಮಸ್ಯೆಗಳನ್ನು ಗುರುತಿಸಿ ಪರಿಹಾರ, ಆವಿಷ್ಕಾರಗಳಿಗೆ ಬೇಕಾದ ಮೂಲಸೌಲಭ್ಯ ಒದಗಣೆ ಈ ಕೇಂದ್ರಗಳಲ್ಲಿ ನಡೆಯಲಿದೆ.

ರಿಜಿಡ್ ಪಿ.ವಿ.ಸಿ.
ಶ್ರೀ ಕೃಷ್ಣ ಪೈಪ್
Ph: (08254) 271261, 271361 (R).
264361, 264444 (Factory)

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಜನವರಿ 11, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

# ಅಡ್ಯಾರ್‌ನಲ್ಲಿ ವಿಜ್ಞಾನ, ತಂತ್ರಜ್ಞಾನ ಸಮಾವೇಶ

**ಮಹಾನಗರ,** ಜ. 10: ನೂರೈವತ್ತು ವರ್ಷ ಬದುಕಬೇಕೆಂದಿದೆ ಏನು ಮಾಡಬೇಕು ಹೇಳಿ? ವಿಜ್ಞಾನಿಗಳಿಗೆ, ವೈದ್ಯರಿಗೆ ಈ ಪ್ರಶ್ನೆ ಕೇಳಿ ಅಚ್ಚರಿಗೊಳಿಸಿದವರು ಬೇರಾರು ಅಲ್ಲ, ಸ್ವತಃ ವಿಜ್ಞಾನಿಯೇ. ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳ ಕಾರ್ಯಕ್ರಮಕ್ಕೆ ಸಮನ್ವಯಕಾರರಾಗಿ ಕಾರ್ಯನಿರ್ವಹಿಸಿದ್ದ ಡಾ। ಶಂಕರ ಪ್ರಸಾದ್ ಈ ಪ್ರಶ್ನೆ ಕೇಳಿದಾಗ ಅಲ್ಲಿ ನಗೆಯೂ, ಅಚ್ಚರಿಯೂ ಜತೆಯಾಯಿತು.

ನಗರದ ಅಡ್ಯಾರಿನಲ್ಲಿ ನಡೆದ ವಿಜ್ಞಾನ-ತಂತ್ರಜ್ಞಾನ-ಆಡಳಿತ ಕುರಿತ 5 ದಿನಗಳ ಸಹ್ಯಾದ್ರಿ ಸಮಾವೇಶದ ಕೊನೆಯ ದಿನವಾದ ಬುಧವಾರ ಆಯೋಜಿಸಿದ್ದ ವಿಜ್ಞಾನಿ-ವೈದ್ಯರು-ಆಡಳಿತಗಾರರ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಈ ಪ್ರಶ್ನೆ ಕೇಳಿದರು.



ವಿಜ್ಞಾನ-ತಂತ್ರಜ್ಞಾನ-ಆಡಳಿತ ಕುರಿತ ಸಮಾವೇಶ ಜರಗಿತು.

ವೈದ್ಯ ಡಾ। ವೇಣು ಗೋಪಾಲ್ ಮಾತನಾಡಿ, ಅವಕಾಶ ಸಿಗಲು ಹಿಂದೆ ಕಷ್ಟವಿತ್ತು. ಆದರೆ ಇನ್ನು ಮುಂದೆ ಹಾಗಾಗದೆ ಮುಂದಿನ ತಲೆಮಾರಿನವರಿಗೆ ಸಿಗಬಹುದು ಎಂದರು. ಸೂಕ್ಷ್ಮ ಜೀವಾಣು ವಿಜ್ಞಾನಿ ದೀಕ್ಷಿತ್ ಚಕ್ರವರ್ತಿ ಮಾತನಾಡಿ, ಗಂಟಲಿನಲ್ಲಿ ನೀರು ಮತ್ತು ಆಹಾರ ಇಳಿಯಬಹುದು ಎಂದಾದರೆ 150 ವರ್ಷ ಬದುಕುವ ಪ್ರಯತ್ನ ಮಾಡಲಡ್ಡಿಯಿಲ್ಲ ಎಂದರು.

ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ, ಯೋಗಗುರು ಡಾ। ಎಸ್. ಎನ್. ಓಂಕಾರ ಮಾತನಾಡಿ, ಯೋಗದಲ್ಲಿ ಪೂರ್ಣಾಯುಷ್ಯ ಎಂದರೆ 120 ವರ್ಷ ಎಂದು ಹೇಳಲಾಗಿದೆ. ಆದರೂ 150 ವರ್ಷ ಬದುಕುವುದು ಕಷ್ಟ. ಈ ಪ್ರಶ್ನೆ ಕೇಳಿದವರನ್ನು ಮೆಚ್ಚಲೇಬೇಕು ಎಂದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ। ಕೆ. ಭೈರಪ್ಪ, ಮಂಗಳೂರು ಕೆ.ಎಂ.ಸಿ.ಯ ಹಿರಿಯ ವೈದ್ಯ ಡಾ। ಆನಂದ ವೇಣು ಗೋಪಾಲ್, ಮುಂಬಯಿಯ ಕಮಲೇಶ್ ಮನುಜ, ಬೆಂಗಳೂರಿನ ಪ್ರೊ। ದೀಕ್ಷಿತಾ, ಡಾ। ಎಸ್.ಎನ್. ಓಂಕಾರ್ ಮತ್ತಿತರರು ಉಪಸ್ಥಿತರಿದ್ದರು.

ರಿಜಿಡ್ ಪಿ.ವಿ.ಸಿ.
ಶ್ರೀ ಕೃಷ್ಣ ಪೈಪ್
Ph: (08254) 271261, 271361 (R), 264361, 264444 (Factory)

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಜನವರಿ 11, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

# ಭೂಮಿ ವಾಸಯೋಗ್ಯವಾಗಿಡಲು ಕೈಜೋಡಿಸಿ

## ನೊಬೆಲ್ ಪುರಸ್ಕೃತ ಸರ್ಜ್ ಹಾರೊಕಿ



ಸುರತ್ಕಲ್, ಜ. 10: ಮಾಲಿನ್ಯದಿಂದ ಭೂಮಿಯ ತಾಪ ಏರುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ವಿಜ್ಞಾನಿಗಳು, ತಜ್ಞರು ಹಾಗೂ ವಿದ್ಯಾರ್ಥಿ ಸಮೂಹ ಈ ನಿಟ್ಟಿನಲ್ಲಿ ಪರಿಣಾಮ ಕಾರಿಯಾಗಿ ಕೆಲಸ ಮಾಡುವ ಮೂಲಕ ಭೂಮಿಯನ್ನು ಮನುಷ್ಯ ವಾಸ ಯೋಗ್ಯವಾಗಿ ಉಳಿಸಿಕೊಳ್ಳಬೇಕಿದೆ ಎಂದು ನೊಬೆಲ್ ಪುರಸ್ಕೃತ ವಿಜ್ಞಾನಿ ಸರ್ಜ್ ಹಾರೊಕಿ ಹೇಳಿದರು.

ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಯುವ ವಿಜ್ಞಾನಿಗಳು, ಎಂಜಿನಿಯರ್‌ಗಳು ಹಾಗೂ ಪ್ರೊಫೆಸರ್‌ಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಭೂಮಿಯ ತಾಪ ಏರಿಕೆಯಾಗುತ್ತಿರುವುದನ್ನು ಲಘುವಾಗಿ ಪರಿಗಣಿಸಲಾಗದು. ವಿಜ್ಞಾನಿಗಳು ಈ ಬಗ್ಗೆ ಸಂಶೋಧನೆ ನಡೆಬೇಕಿದೆ. ಇದಕ್ಕೆ ನಾಯಕರು ಸ್ಪಂದಿಸಬೇಕು ಎಂದರು.

ಇಂದು ಔದ್ಯಮೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ. ವಿಜ್ಞಾನಿಗಳು, ಎಂಜಿನಿಯರ್‌ಗಳು ಕ್ಷಿಪ್ರವಾಗಿ ದುಡಿಯಲಾರರು, ಲಾಭ ಇಲ್ಲ ಎಂಬ ಮನೋಭಾವ ಬೆಳೆಯುತ್ತಿದೆ. ಭಾರತ ಸರಕಾರ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡ ಬೇಕು. ಶಿಕ್ಷಕರಿಗೆ ಸಮರ್ಪಕ ತರಬೇತಿ ನೀಡಿ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವುದರ ಮೂಲಕ ವೈಜ್ಞಾನಿಕ, ಸಂಶೋಧನಾತ್ಮಕ ಪ್ರತಿಭೆಗಳನ್ನು ಜಗತ್ತಿಗೆ ನೀಡುವ ಕೆಲಸವಾಗಬೇಕು ಎಂದು ಹೇಳಿದರು.

ಇನ್ನೋರ್ವ ನೊಬೆಲ್ ವಿಜೇತೆ ಎಡಾ ಇ. ಯೊನಾತ್ ಮಾತನಾಡಿ, ನೀವು ಯಾರದೇ ಸಲಹೆ ಪಡೆದುಕೊಳ್ಳುವ ಮುನ್ನ ನೀವು ಏನಾಗಬೇಕು ಎಂಬುದನ್ನು ಯೋಚಿಸಿ ಹೆಜ್ಜೆ ಇಡಿ. ಇದರಿಂದ ನಿಮ್ಮ ನಿಮ್ಮ ಆಸಕ್ತಿಯ ಕ್ಷೇತ್ರವನ್ನು ಪ್ರವೇಶಿಸಿ ಸಂಶೋಧನೆ ನಡೆಸಲು ಸಾಧ್ಯವಿದೆ. ಸಂಶೋಧನೆಯನ್ನು ಕುಟುಂಬ ಜೀವನದೊಂದಿಗೆ ನಡೆಸಿ ಆನಂದದಿಂದಿರಲು ಪ್ರಯತ್ನಿಸಿ ಎಂದು ಕಿವಿಮಾತು ಹೇಳಿದರು. ಎನ್‌ಐಟಿಕೆ ನಿರ್ದೇಶಕ ಪ್ರೊ। ಕರಣಂ ಉಮಾ ಮಹೇಶ್ವರ ರಾವ್, ಮಂಜುನಾಥ್ ಭಂಡಾರಿ ಉಪಸ್ಥಿತರಿದ್ದರು.

ಗುರುವಾರ, ಜನವರಿ 11, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 11 | ಪುಟ 24 + 2
www.prajavani.net
f /prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಕಾಮನಬಿಲ್ಲು
ಸಲೀಸಾಗಿ ಸರಸರನೆ ಬಂಡೆಗಳನ್ನು ಏರಿಬಿಡಬಲ್ಲ ಈ ಯುವಕನ ಸಾಹಸ ಎಲ್ಲರನ್ನೂ ಕತ್ತೆತ್ತಿ ನೋಡುವಂತೆ ಮಾಡುತ್ತಿದೆ



ನಾರಾಯಣ ಮೂರ್ತಿ ಅಳಿಯ ಬ್ರಿಟನ್ ಸಚಿವ 10

132 ಸ್ಥಳಗಳಲ್ಲಿ ಐ.ಟಿ ಶೋಧ 8

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 34,433 ▼ | 10,632 ▼ | ₹29,893 (ಬೆಂಗಳೂರು) ▲ | ₹39,200 (ಬೆಂಗಳೂರು) ▲ | 63.60 ▲ |

## ಐಟಿ ಕ್ಷೇತ್ರದ ಅಭಿವೃದ್ಧಿಗೆ ಹಲವು ಯೋಜನೆ: ಗೌರವ್ ಗುಪ್ತ

# ಸಂಶೋಧನೆಗೆ ₹100 ಕೋಟಿ ಮಂಜೂರು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಸಹ್ಯಾದ್ರಿ ಸಮ್ಮೇಳನಕ್ಕೆ 4 ಸಾವಿರ ವಿದ್ಯಾರ್ಥಿಗಳ ಭೇಟಿ
- ನೀರು, ಆರೋಗ್ಯ, ಪರಿಸರ, ಇಂಧನ ಕುರಿತು ಚರ್ಚೆ–ಸಂವಾದ
- ಸಮ್ಮೇಳನದ ಕುರಿತು ಅಭಿಪ್ರಾಯ ಹಂಚಿಕೊಂಡ ವಿದ್ಯಾರ್ಥಿಗಳು

ಮಂಗಳೂರು: ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಒತ್ತು ನೀಡುತ್ತಿದ್ದು, ನಾಲ್ಕು ವರ್ಷಗಳಲ್ಲಿ ಸಂಶೋಧನೆಗಾಗಿಯೇ ₹100 ಕೋಟಿ ಮಂಜೂರು ಮಾಡಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಐದು ದಿನಗಳ ಸಹ್ಯಾದ್ರಿ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಬುಧವಾರ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಗಾಗಿ ಆಸ್ಟ್ರೇಲಿಯಾ, ಇಸ್ರೇಲ್, ಜರ್ಮನಿ ಸೇರಿದಂತೆ ಹಲವು ದೇಶಗಳ ವಿಜ್ಞಾನ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದರು.

ಬೆಂಗಳೂರು ಹೊರತುಪಡಿಸಿ, ಬೇರೆ ಪ್ರದೇಶಗಳ ಜನರಿಗೂ ಸರ್ಕಾರದ ಸೌಕರ್ಯಗಳು ದೊರೆಯಬೇಕು ಎನ್ನುವ ಉದ್ದೇಶದಿಂದ ಇನ್‌ಕ್ಯುಬೇಷನ್ ನೆಟ್‌ವರ್ಕ್ ರೂಪಿಸಲಾಗಿದ್ದು, ಮೊದಲ ಹಂತದಲ್ಲಿ 9 ಕಾಲೇಜುಗಳನ್ನು ಜೋಡಿಸಲಾಗಿದೆ. ಎರಡನೇ ಹಂತದಲ್ಲಿ ನಗರದ ಸಹ್ಯಾದ್ರಿ ಕಾಲೇಜು ಸೇರಿದಂತೆ 11 ಕಾಲೇಜುಗಳನ್ನು ಸೇರ್ಪಡೆ ಮಾಡಲಾಗಿದೆ ಎಂದು ತಿಳಿಸಿದರು.

ನೊಬೆಲ್ ಪ್ರಶಸ್ತಿ ಪುರಸ್ಕೃತ ರಸಾಯನ ವಿಜ್ಞಾನಿ ಅಡಾ ಇ. ಯೊನಾಥ್ ಮಾತನಾಡಿ, ಇಲ್ಲಿನ ವಿದ್ಯಾರ್ಥಿಗಳಲ್ಲಿ ಇರುವ ಉತ್ಸಾಹ ಮೆಚ್ಚುವಂಥದ್ದು. ವಿಜ್ಞಾನದಲ್ಲಿ ಆಸಕ್ತಿ ಇದೆ. ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವ ಮೂಲಕ ಸಮಾಜದ ಅಭಿವೃದ್ಧಿಗೆ ತೊಡಗಿಸಬೇಕು ಎಂದು ಹೇಳಿದರು.

> ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿಸುವತ್ತ ಯುವ ಸಮುದಾಯ ಗಮನ ನೀಡಬೇಕು.
>
> **ಗೌರವ ಗುಪ್ತ,** ಐಟಿ, ಬಿಟಿ, ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ

ನೊಬೆಲ್ ಪ್ರಶಸ್ತಿ ಪುರಸ್ಕೃತ ಭೌತ ವಿಜ್ಞಾನಿ ಸರ್ಜ್ ಹಾರೊಕೆ ಮಾತನಾಡಿ, '11 ವರ್ಷದ ವಿದ್ಯಾರ್ಥಿಯೊಬ್ಬ ತನ್ನ ವಿಜ್ಞಾನ ಮಾದರಿಯನ್ನು ನನ್ನ ಜತೆಗೆ ಹಂಚಿಕೊಂಡ. ಇದಕ್ಕಿಂತ ದೊಡ್ಡ ಗೌರವ ಬೇರೊಂದಿಲ್ಲ. ಅಷ್ಟರಮಟ್ಟಿಗೆ ಸಹ್ಯಾದ್ರಿ ಸಮ್ಮೇಳನ ಯಶಸ್ವಿಯಾಗಿದೆ' ಎಂದು ಅಭಿಪ್ರಾಯಪಟ್ಟರು.

ಟರ್ನಿಂಗ್ ಪ್ರಶಸ್ತಿ ವಿಜೇತ ವಿಜ್ಞಾನಿ ಜೋಸೆಫ್ ಸಿಫಾಕಿಸ್ ಮಾತ ನಾಡಿ, 'ಅರ್ಥಪೂರ್ಣ ಜೀವನ ನಡೆಸ ಬೇಕು. ಅದಕ್ಕಾಗಿ ಉನ್ನತ ಗುರಿ ಇಟ್ಟುಕೊಳ್ಳಬೇಕು. ಸೋಲುಗಳಿಗೆ ಹೆದರದೇ, ಕೀಳರಿಮೆಯನ್ನು ಬಿಟ್ಟು ನಿಮ್ಮತನವನ್ನು ಬೆಳೆಸಿಕೊಳ್ಳಿ' ಎಂದು ಸಲಹೆ ಮಾಡಿದರು.



ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಸಹ್ಯಾದ್ರಿ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಅಡಾ ಇ. ಯೊನಾಥ್ ಮಾತನಾಡಿದರು. ಪ್ರಜಾವಾಣಿ ಚಿತ್ರ

### ಸಹ್ಯಾದ್ರಿಯಲ್ಲಿ ಎನ್‌ಎಐಎನ್ ಕೇಂದ್ರ

ರಾಜ್ಯ ಸರ್ಕಾರ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ವತಿಯಿಂದ ಮಂಗಳೂರು ವಲಯದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ ಮೂಲ ಸೌಲಭ್ಯ ಕಲ್ಪಿಸುವ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ (ಎನ್‌ಎಐಎನ್) ಸೆಂಟರ್ ಸ್ಥಾಪನೆಗೆ ಅನುಮೋದನೆ ನೀಡಿದೆ.

ನೈನ್ ಕೇಂದ್ರವು ಯುವ ಮನಸ್ಸುಗಳ ಆಲೋಚನೆಗಳನ್ನು ಕಾರ್ಯಗತಗೊಳಿಸಲು ಮೂಲಸೌಲಭ್ಯ ಒದಗಿಸುವ ಮೂಲಕ ಯಶಸ್ವಿ ಉದ್ಯಮಿಯಾಗಲು ಉತ್ತೇಜಿಸಲಿದೆ. ಅಲ್ಲದೇ ಸೂಕ್ತ ಸಲಹೆ ನೀಡುವುದು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಆವಿಷ್ಕಾರಕ್ಕೆ ಬೇಕಾದ ಆಲೋಚನೆಗಳ ಮೂಲಕ ಪ್ರೋತ್ಸಾಹ ನೀಡಲಿದೆ.

ನೈನ್ ಕೇಂದ್ರದ ಮಾರ್ಗದರ್ಶಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಹೊಸ ತಂತ್ರಜ್ಞಾನಕ್ಕೆ ತಕ್ಕಂತೆ ವ್ಯವಹಾರದ ಮಾದರಿಯನ್ನು ತಯಾರಿಸುವಂತೆ ಪ್ರೋತ್ಸಾಹಿಸಿ, ಹೊಸ ತಂತ್ರಜ್ಞಾನದ ಯುಗದಲ್ಲಿ ಯಶಸ್ವಿ ಉದ್ಯಮಿಯಾಗುವಂತೆ ಪ್ರೇರೇಪಿಸುವುದು ಕೇಂದ್ರದ ಮುಖ್ಯ ಕೆಲಸವಾಗಿದೆ.

ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ. ಭೈರಪ್ಪ ಮಾತನಾಡಿ, ವಿಜ್ಞಾನ ಕ್ಷೇತ್ರದಲ್ಲಿ ಭಾರತೀಯರ ಸಾಧನೆ ಅಪಾರವಾಗಿದೆ. ನೊಬೆಲ್ ಪ್ರಶಸ್ತಿ ಪಡೆಯಲು ಅರ್ಹರಾದ ವಿಜ್ಞಾನಿಗಳು ಇಲ್ಲಿದ್ದಾರೆ. ಅದರ ಜತೆಗೆ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿಗಳ ಜತೆಗೆ ವಿದ್ಯಾರ್ಥಿಗಳು ಸಂವಾದ ಮಾಡಲು ಅವಕಾಶ ಸಿಕ್ಕಿರುವುದು ಜೀವನದ ಬಹುದೊಡ್ಡ ಕ್ಷಣ ಎಂದು ತಿಳಿಸಿದರು.


ಪ್ರಾಸ್ತಾವಿಕವಾಗಿ ಮಾತನಾಡಿದ ಸಹ್ಯಾದ್ರಿ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ, 11 ತಿಂಗಳಿಂದ ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬ್ಬಂದಿಯ ಶ್ರಮಕ್ಕೆ ಇದೀಗ ಪ್ರತಿಫಲ ದೊರೆತಿದೆ. ಸುಮಾರು 4 ಸಾವಿರ ವಿದ್ಯಾರ್ಥಿಗಳು ಈ ಸಮ್ಮೇಳನದ ಪ್ರಯೋಜನ ಪಡೆದಿದ್ದಾರೆ. ಪ್ರತಿ ವರ್ಷ ಇಂತಹ ಸಮ್ಮೇಳನ ಆಯೋಜಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಸುರತ್ಕಲ್ ಎನ್‌ಐಟಿಕೆ ನಿರ್ದೇಶಕ ಪ್ರೊ. ಕರ್ಣಂ ಉಮಾಮಹೇಶ್ವರ ರಾವ್ ಮಾತನಾಡಿದರು. ಸಂಸ್ಥೆ ನಿರ್ದೇ ಶಕ ಪ್ರೊ. ಡಿ.ಎಲ್. ಪ್ರಭಾಕರ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರ ಜ್ಞಾನ ಇಲಾಖೆಯ ಹೊನ್ನೇಗೌಡ ವೇದಿಕೆಯಲ್ಲಿದ್ದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಯು.ಎಂ. ಭೂಷಿ ಸ್ವಾಗತಿಸಿದರು.

ಸಮ್ಮೇಳನದ ಕುರಿತು 9 ನೇ ತರಗತಿ ವಿದ್ಯಾರ್ಥಿನಿ ನಿತ್ಯಪ್ರಿಯ, ಎಂಜಿನಿಯರಿಂಗ್ ಪ್ರಥಮ ವರ್ಷದ ವಿದ್ಯಾರ್ಥಿನಿ ಶಿಖಾ ಅಭಿಪ್ರಾಯ ಹಂಚಿಕೊಂಡರು.

DH
DECCAN HERALD
Mangaluru, Thursday January 11, 2018
Pages 18 Vol 21 No 11 ₹6.00 M www.deccanherald.com

CENTRAL LIBRARY



Pak journo escapes kidnap bid

Page 12





# Research and development holds key for bright society: top official

**MANGALURU: Academic teaching alone will not make a bright society. Research and development is very important for this, said Gaurav Gupta, IT, BT and Tourism Department principal secretary to the Government of Karnataka.**

He was speaking as chief guest at the valedictory programme of Sahyadri Conclave organised by the Sahyadri College of Engineering and Management in Adyar on Wednesday.

"In this regard, the IT – BT Department of the state is putting in efforts to partner with countries like Australia, Israel, Finland, Germany, England towards research research programmes," he lauded.




Gaurav Gupta, Government of Karnataka IT, BT and Tourism Department principal secretary, speaks at the valedictory programme of Sahyadri Conclave organised by Sahyadri College of Engineering and Management in Adyar on Wednesday.

Stating that the Karnataka Government has invested over Rs 100 crore in the last four years towards research and development in various institutions, Guarav Gupta said that the Information and Technology Department has formulated programmes involving local communities, students and national institutes.

## Immersion programmes

Immersion programmes have been planned for the top performing students in Secondary School Leaving Certificate, from government colleges.

Under the programmes, the students will visit Institutes like Indian Institute of Science and Jawaharlal Nehru Centre.

## 'Critical thinking'

Speaking on the occasion, Serge Haroche, Nobel laureate in Physics, called upon the students to develop critical thinking.

"One's own way of looking at the world is important in the present time, where fake news and conspiracies are spreading," the principal secretary advised.


Gupta meanwhile appreciated the projects displayed by the students during the conclave. Nobel laureate in Chemistry Ada E Yonath was also present at the conclave.

Turing Award winner in Computer Science Joseph Sifakis, NITK director Prof Karnam Uma Maheshwar Rao, Mangalore University vice chancellor Prof K Byrappa, Bhandary Foundation chairman Manjunath Bhandary, Sahyadri College of Engineering and Management director Prof D L Prabhakara were present among others.

**DH News Service**

DH
DECCAN HERALD
Mangaluru, Thursday January 11, 2018
Pages 18 Vol 21 No 11 ₹6.00 M www.deccanherald.com

CENTRAL LIBRARY



Pak journo escapes kidnap bid

Page 12





# Nobel laureate, scientists share ideas at conclave

**MANGALURU, DHNS: An organism's vital functions are managed by large, complex protein molecules produced in cells ribosomes and their genetic information from 'messenger RNA' is translated into chains of amino acids that then build proteins, said Israeli Scientist and Nobel laureate in Chemistry Ada E Yonath.**

She was delivering a talk on 'The Fruits of Curiosity' during the fourth day of Sahyadri Conclave organised by Sahyadri College and Engineering and Management at Adyar in Mangaluru on Wednesday.

Mentioning about 20 types of Amino Acids, Ada E Yonath explained the functions of proteins in the lives of all organisms. Stress induces periodical packing of ribosome particles, she said. Stating that she was inspired by Madam Marie Sklodowska Curie, she added that curiosity and passion brought her to the position where she is now.

During the second plenary session, UPSC former chairman Dr D P Agrawal spoke on waste disposal and stressed upon the role of technology in managing the daily waste in home appliances. Industrial waste, building and agriculture waste should be treated scientifically.

Centre of Excellence in Aerospace and Defence (CEAD) former chairman and Aeronautical Development Agency former Director C D Balaji delivered a talk on 'Aerospace environment and ecosystem'. He spoke about various environmental challenges in aeronautics which included air quality and particulate emissions, aircraft noise, water pollution from airline services and radiation exposure generally seen in the field of aeronautics.



Nobel Laureate Ada E Yonath

He also highlighted various methods adopted in the current era to mitigate these issues. In a nutshell, he also spoke about light combat aircraft design and multiple threat scenarios involved in the design.

A panel discussion was held on the theme 'Environment', in which IISc, Bangalore, Aerospace Engineering professor Jagadeesh Gopalan, Central University of Karnataka vice chancellor Prof S S Murthy and Alliance University, Bengaluru vice chancellor Dr B K Ravindra took part.

S-VYASA University advisor Prahlad Rama Rao was the moderator.

Concerns about the environment, likely solutions, sustainability and prevention of the same were addressed in the panel discussion.



ಕರ್ನಾಟಕ 81 ಟಿಎಂಸಿ ಕಾವೇರಿ ನೀರು ಬಿಡಲಿ: ತ.ನಾಡು 9

ಜೋಯಾಲುಕ್ಕಾಸ್ 130 ಮಳಿಗೆಗಳಿಗೆ ಆದಾಯ ತೆರಿಗೆ ದಾಳಿ 10

ಗಗನಕ್ಕೇರಿದ ಜಾಗತಿಕ ಕಚ್ಚಾ ತೈಲ: 4 ವರ್ಷಗಳಲ್ಲೇ ಆತ್ಯಧಿಕ 10

ಇಸ್ರೋಗೆ ಮುಂದಿನ 3 ವರ್ಷ ಕೆ.ಶಿವನ್ ಸಾರಥ್ಯ 9

ಮಂಗಳೂರು
ಗುರುವಾರ
11 ಜನವರಿ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ (ದೃಗ್ಗಣಿತ ಆನುಸಾರ) ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ವಿಶಾಖೆ
ಬೆಲೆ ₹ 5.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 285, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at


ಐದು ದಿನಗಳ 'ಸಹ್ಯಾದ್ರಿ ಕಾನ್‌ಕ್ಲೇವ್' ಸಮಾರೋಪ | ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿಕೆ

## ವಿಜ್ಞಾನ ಕ್ಷೇತ್ರದ ಸಂಶೋಧನೆಗೆ ಸರಕಾರ ಬದ್ಧ

ದಿಗಂತ ವರದಿ: ಮಂಗಳೂರು, ಜ.10

ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯಗಳು ಮತ್ತು ವಿಜ್ಞಾನ ಮಾದರಿಗಳ ತಯಾರಿಗಾಗಿ ರಾಜ್ಯ ಸರಕಾರ ಕಳೆದ 4 ವರ್ಷಗಳಲ್ಲಿ ರೂ.100 ಕೋಟಿಗೂ ಅಧಿಕ ಅನುದಾನ ಒದಗಿಸಿದೆ ಎಂದು ಐಟಿ, ಬಿಟಿ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ ಗುಪ್ತ ಹೇಳಿದ್ದಾರೆ.

ಅವರು ಬುಧವಾರ ಸಹ್ಯಾದ್ರಿ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಐದು ದಿನಗಳ ಸಹ್ಯಾದ್ರಿ ವಿಜ್ಞಾನ ಮಹಾ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಕೇವಲ ಬೋಧನೆಯಿಂದ ವಿದ್ಯಾರ್ಥಿಗಳನ್ನು ವಿಜ್ಞಾನದತ್ತ ಸೆಳೆಯಲು ಸಾಧ್ಯವಿಲ್ಲ, ಯುವ ಜನತೆಯನ್ನು ವಿಜ್ಞಾನದತ್ತ ಆಕರ್ಷಿಸಲು ತರಬೇತಿ, ಮಾದರಿಗಳ ತಯಾರಿ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ. ಸರಕಾರಿ ಶಾಲೆಗಳ 400 ಪ್ರತಿಭಾವಂತ ವಿದ್ಯಾರ್ಥಿಗಳನ್ನು ವಿಜ್ಞಾನ ತರಬೇತಿಗಾಗಿ ಆಯ್ಕೆ ಮಾಡಲಾಗಿದೆ. ಅವರಿಗೆ ವಿವಿಧ ಸಂಸ್ಥೆಗಳಲ್ಲಿ ತರಬೇತಿ ನೀಡಿ ವಿಜ್ಞಾನದ ಒಲವು ಮೂಡಿಸಲಾಗುವುದು ಎಂದು ಗೌರವ ಗುಪ್ತ ನುಡಿದರು.



ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಗಳಿಗಾಗಿ ಅಮೆರಿಕಾ, ಆಸ್ಟ್ರೇಲಿಯಾ, ಫ್ರಾನ್ಸ್, ಇಸ್ರೇಲ್ ಮೊದಲಾದ ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹೊಸ ಹೊಸ ಆವಿಷ್ಕಾರಗಳಿಗೂ ಆದ್ಯತೆ ನೀಡಲಾಗಿದೆ ಎಂದು ಗೌರವ ಗುಪ್ತ ನುಡಿದರು.

ನೋಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳಾದ ಅಡಾ ಇ ಯೋನತ್ ಮತ್ತು ಸರ್ಜೆ ಹಾರೊಚೆ ಮಾತನಾಡಿ, ಐದು ದಿನಗಳ ವಿಜ್ಞಾನ ಸಮಾವೇಶ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ. ಸಂವಾದಗಳು ಫಲಭರಿತವಾಗಿದ್ದವು ಎಂದರು. ಟ್ಯೂರಿಂಗ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಜೋಸೆಫ್ ಸಿಫಾಕೆ ಮಾತನಾಡಿ, ಯುವ ವಿಜ್ಞಾನಿಗಳ ಮತ್ತು ವಿದ್ಯಾರ್ಥಿಗಳ ವಿಜ್ಞಾನದ ಕುತೂಹಲ ಭವಿಷ್ಯದಲ್ಲಿ ಉತ್ತಮ ಫಲಿತಾಂಶ ನೀಡಲಿದೆ ಎಂದರು.

> **ವಿಜ್ಞಾನದ ಒಲವು ಮೂಡಿಸಿ**
>
> **ಕೇವಲ ಬೋಧನೆಯಿಂದ ವಿದ್ಯಾರ್ಥಿಗಳನ್ನು ವಿಜ್ಞಾನದತ್ತ ಸೆಳೆಯಲು ಸಾಧ್ಯವಿಲ್ಲ, ಯುವ ಜನತೆಯನ್ನು ವಿಜ್ಞಾನದತ್ತ ಆಕರ್ಷಿಸಲು ತರಬೇತಿ, ಮಾದರಿಗಳ ತಯಾರಿ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ. ಸರಕಾರಿ ಶಾಲೆಗಳ 400 ಪ್ರತಿಭಾವಂತ ವಿದ್ಯಾರ್ಥಿಗಳನ್ನು ವಿಜ್ಞಾನ ತರಬೇತಿಗಾಗಿ ಆಯ್ಕೆ ಮಾಡಲಾಗಿದೆ. ಅವರಿಗೆ ವಿವಿಧ ಸಂಸ್ಥೆಗಳಲ್ಲಿ ತರಬೇತಿ ನೀಡಿ ವಿಜ್ಞಾನದ ಒಲವು ಮೂಡಿಸಲಾಗುವುದು.**
>
> ■ ಗೌರವ ಗುಪ್ತ ಪ್ರ.ಕಾರ್ಯದರ್ಶಿ

ಎನ್‌ಐಟಿಕೆ ನಿರ್ದೇಶಕ ಪ್ರೊ.ಕರಣಂ ಉಮಾಮಹೇಶ್ವರ ರಾವ್, ಮಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ.ಭೈರಪ್ಪ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ವಿಶ್ವದ ಖ್ಯಾತ ವಿಜ್ಞಾನಿಗಳನ್ನು ಒಂದೇ ವೇದಿಕೆಯಲ್ಲಿ ತಂದು ವಿದ್ಯಾರ್ಥಿಗಳಿಗೆ ಸಂವಾದದ ಅವಕಾಶ ಒದಗಿಸಿದ ಸಹ್ಯಾದ್ರಿ ಕಾಲೇಜಿನ ಶ್ರಮವನ್ನು ಶ್ಲಾಘಿಸಿದರು.

ಸಹ್ಯಾದ್ರಿ ಕಾಲೇಜಿನ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಪ್ರಾಸ್ತಾವಿಕ ಮಾತನಾಡಿ, ಸರಕಾರ ಬೆಂಬಲಿಸಿದರೆ ಪ್ರತಿ ವರ್ಷ ವಿಜ್ಞಾನ ಮಹಾ ಸಮ್ಮೇಳನ ನಡೆಸಲಾಗುವುದು ಎಂದರು.

ಸಹ್ಯಾದ್ರಿ ಕಾಲೇಜಿನ ನಿರ್ದೇಶಕ ಡಾ.ಡಿ.ಎಲ್ .ಪ್ರಭಾಕರ್, ಪ್ರಾಂಶುಪಾಲ ಡಾ.ಉಮೇಶ್ ಭೂಷಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ನಿತ್ಯಪ್ರಿಯಾ ಭೂಷಿ ಮತ್ತು ಶಿಖಾ ಕೆ.ಎಸ್ ಮಹಾ ಸಮ್ಮೇಳನದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸಮಾವೇಶದ ಸಹ ಸಂಯೋಜಕ ಅನೂಷ್ ಬೇಕಲ್ ಸಮಾವೇಶದ ಸಂಕ್ಷಿಪ್ತ ವರದಿಯನ್ನು ಮಂಡಿಸಿದರು.


ಗುರುವಾರ 11.1.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
52 ವರ್ಷ • ಸಂಚಿಕೆ 11 • ಪುಟ 12+4 • ಬೆಲೆ ₹5
epaper.kannadaprabha.in

# ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾರತದ ಅಭಿವೃದ್ಧಿ ದರ: ವಿಶ್ವಬ್ಯಾಂಕ್ ಶ್ಲಾಘನೆ 9

CENTRAL LIBRARY



ಸಮಾರೋಪ | ಸಹ್ಯಾದ್ರಿಯಲ್ಲಿ 5 ದಿನಗಳ ವಿಜ್ಞಾನ, ತಂತ್ರಜ್ಞಾನ ಮತ್ತು ಮೆನೇಜ್‌ಮೆಂಟ್ ಸಮಾವೇಶ ಸಮಾರೋಪ

# ವಿವಿಧ ಜಿಲ್ಲೆಗಳಲ್ಲಿ ಎನ್‌ಎಐಎನ್ ಸ್ಥಾಪನೆ: ಗೌರವ್ ಗುಪ್ತಾ

**• ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರು ರಾಜ್ಯದ ಐಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಕೇಂದ್ರ ಸ್ಥಾನವಾಗಿದೆ. ಇದನ್ನು ಇತರ ಜಿಲ್ಲೆಗಳಿಗೂ ಇದನ್ನು ವಿಸ್ತರಿಸುವ ಉದ್ದೇಶದಿಂದ ನ್ಯೂ ಏಜ್ ಇನ್‌ಕ್ಯುಬೇಶನ್ ನೆಟ್‌ವರ್ಕ್ (ಎನ್‌ಎಐಎನ್) ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ರಾಜ್ಯ ಸರ್ಕಾರದ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿದರು.

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ 5 ದಿನಗಳ ಕಾಲ ನಡೆದ ವಿಜ್ಞಾನ, ತಂತ್ರಜ್ಞಾನ ಮತ್ತು ಮೆನೇಜ್‌ಮೆಂಟ್ ಕುರಿತ ಸಹ್ಯಾದ್ರಿ ಸಮಾವೇಶದ ಬುಧವಾರ ನಡೆದ ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇನ್‌ಕ್ಯುಬೇಶನ್ ನೆಟ್‌ವರ್ಕ್‌ಗೆ ರಾಜ್ಯದಲ್ಲಿ ಒಟ್ಟು 20 ಕಾಲೇಜುಗಳನ್ನು ಆಯ್ಕೆ ಮಾಡಲಾಗಿದೆ. ಮಂಗಳೂರಿನಲ್ಲಿ ಸಹ್ಯಾದ್ರಿ ಕಾಲೇಜು ಅವುಗಳಲ್ಲಿ ಒಂದಾಗಿದೆ. ಮೊದಲ ಹಂತದಲ್ಲಿ 9 ಹಾಗೂ ಎರಡನೇ ಹಂತದಲ್ಲಿ 11 ಕಾಲೇಜುಗಳಲ್ಲಿ ಇನ್‌ಕ್ಯುಬೇಶನ್ ನೆಟ್‌ವರ್ಕ್ ಆರಂಭವಾಗಲಿದೆ. ಇಲ್ಲಿ ಎಂಜಿನಿಯರಿಂಗ್ ಪ್ರಾಜೆಕ್ಟ್‌ಗಳ ಜೊತೆಗೆ, ಸಮಾಜದ ವಿವಿಧ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ.

ಯುವ ಸಮುದಾಯ ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಯನ ಮೂಲಕ ಸಂಚಾರ ಮತ್ತು ಸಾಗಾಣೆ, ತಾಜ್ಯ ನೀರು, ನೈರ್ಮಲ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು, ರೋಗಗಳನ್ನು ಶೀಘ್ರ ಪತ್ತೆಹಚ್ಚುವುದರ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರುವುದು, ಕೃಷಿ ಸಂಬಂಧಿಸಿ ಹೊಸ ತಂತ್ರಜ್ಞಾನ ಕಂಡುಹಿಡಿಯುವುದು, ಶಿಕ್ಷಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆ ಮಾಡುವ ಕುರಿತಂತೆ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ ಎಂದರು.

ಸುರತ್ಕಲ್ ಎನ್‌ಐಟಿಕೆ ನಿರ್ದೇಶಕ ಕರಣಂ ಉಮಾಮಹೇಶ್ವರ ರಾವ್ ಮಾತನಾಡಿ, ಸಮಾಜ, ವಿದ್ಯಾರ್ಥಿಗಳು, ಯುವ ಜನಾಂಗವನ್ನು ಸೇರಿಸಿ ವಿಜ್ಞಾನ, ತಂತ್ರಜ್ಞಾನ, ಮೆನೇಜ್‌ಮೆಂಟ್ ಕುರಿತ ಮಾಹಿತಿಗಳನ್ನು ನೀಡಿರುವುದು ಸಹ್ಯಾದ್ರಿ ಸಮಾವೇಶದ ವಿಶೇಷತೆಯಾಗಿದೆ ಎಂದರು.

ಭಂಡಾರಿ ಫೌಂಡೇಶನ್ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ನೋಬೆಲ್ ಪ್ರಶಸ್ತಿ ಪುರಸ್ಕೃತರಾದ ಅಡಾ ಇ.ಯೋನಾಥ್, ಸರ್ಜ್ ಹೆರೋಶ್, ಟ್ಯೂರಿಂಗ್ ಅವಾರ್ಡ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಕೆಎಸ್‌ಟಿಇಪಿಎಸ್ ಆಡಳಿತ ನಿರ್ದೇಶಕ ಡಾ.ಹೊನ್ನೇಗೌಡ ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಬೈರಪ್ಪ, ಪ್ರಾಂಶುಪಾಲ ಪ್ರೊ.ಯು.ಎಂ.ಭೂಷಿ, ನಿರ್ದೇಶಕ ಪ್ರೊ. ಡಿ.ಎಲ್. ಪ್ರಭಾಕರ್, ಬಾಲಕೃಷ್ಣ ಭಂಡಾರಿ, ದೇವರಾಜ್ ಹೆಗ್ಡೆ, ಜಗನ್ನಾಥ ಚೌಟ ಇದ್ದರು.

KP



**ಸಮಾರೋಪ ಸಮಾರಂಭದಲ್ಲಿ ಗೌರವ್ ಗುಪ್ತಾ ಮಾತನಾಡುತ್ತಿರುವುದು.**

**ಇನ್‌ಕ್ಯುಬೇಶನ್ ನೆಟ್‌ವರ್ಕ್‌ಗೆ ರಾಜ್ಯದಲ್ಲಿ ಒಟ್ಟು 20 ಕಾಲೇಜುಗಳನ್ನು ಆಯ್ಕೆ ಮಾಡಲಾಗಿದೆ. ಮಂಗಳೂರಿನಲ್ಲಿ ಸಹ್ಯಾದ್ರಿ ಕಾಲೇಜು ಅವುಗಳಲ್ಲಿ ಒಂದಾಗಿದೆ. ಮೊದಲ ಹಂತದಲ್ಲಿ 9 ಹಾಗೂ ಎರಡನೇ ಹಂತದಲ್ಲಿ 11 ಕಾಲೇಜುಗಳಲ್ಲಿ ಇನ್‌ಕ್ಯುಬೇಶನ್ ನೆಟ್‌ವರ್ಕ್ ಆರಂಭವಾಗಲಿದೆ**

**• ಗೌರವ್ ಗುಪ್ತಾ**

ಗುರುವಾರ,11 ಜನವರಿ 2018 | ಪುಟಗಳು: 14+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 166
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಅಂತಾರಾಷ್ಟ್ರೀಯ ಸ್ಕೀಯಿಂಗ್: ಭಾರತಕ್ಕೆ ಚೊಚ್ಚಲ ಪದಕ ಗೆದ್ದುಕೊಟ್ಟ ಆಂಚಲ್ ಠಾಕೂರ್ P12

ಆರ್ಥಿಕ ನೆರವು ಸ್ಥಗಿತಕ್ಕೆ ಪ್ರತೀಕಾರವಾಗಿ ಪಾಕಿಸ್ತಾನ ಅಮೆರಿಕಕ್ಕೆ ನೀಡುತ್ತಿದ್ದ ಗುಪ್ತಚರ ಮಾಹಿತಿ ಮತ್ತು ಮಿಲಿಟರಿ ಸಹಕಾರವನ್ನು ಸ್ಥಗಿತಗೊಳಿಸಿದೆ.

ಸೈನಾ ಜೀವನಾಧರಿತ ಚಿತ್ರಕ್ಕೆ ಶ್ರದ್ಧಾ ಕಪೂರ್ ಬದಲಿಗೆ ದೀಪಿಕಾ ನಾಯಕಿ ಸಾಧ್ಯತೆ

# 20 ಕಾಲೇಜುಗಳಿಗೆ ಇನ್‌ಕ್ಯುಬೇಶನ್ ನೆಟ್‌ವರ್ಕ್ ಸೆಂಟರ್

## ಸಹ್ಯಾದ್ರಿ ಸಮಾವೇಶ'ದಲ್ಲಿ ಐಟಿ, ಬಿಟಿ ಪ್ರಿನ್ಸಿಪಾಲ್ ಸೆಕ್ರಟರಿ ಗೌರವ ಗುಪ್ತಾ

**ವಿಕ ಸುದ್ದಿಲೋಕ** ಮಂಗಳೂರು

ಮಾಹಿತಿ ತಂತ್ರಜ್ಞಾನ, ಜೈವಿಕ ವಿಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ರಾಜ್ಯದಲ್ಲಿ ಒಟ್ಟು 20 ಕಾಲೇಜುಗಳಲ್ಲಿ ನ್ಯೂ ಏಜ್ ಇನ್ ಕ್ಯುಬೇಶನ್ ನೆಟ್‌ವರ್ಕ್(ನೈನ್) ಸೆಂಟರ್‌ಗಳನ್ನು ತೆರೆಯಲಾಗುವುದು ಎಂದು ರಾಜ್ಯ ಸರಕಾರದ ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಿನ್ಸಿಪಾಲ್ ಸೆಕ್ರಟರಿ ಗೌರವ ಗುಪ್ತಾ ಹೇಳಿದರು.

ನಗರದ ಹೊರವಲಯದ ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿರುವ 'ಸಹ್ಯಾದ್ರಿ ಸಮಾವೇಶ' ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.



ಮೊದಲ ಹಂತದಲ್ಲಿ ರಾಜ್ಯದ 9 ಕಾಲೇಜುಗಳಲ್ಲಿ ಇನ್‌ಕ್ಯುಬೇಶನ್ ಸೆಂಟರ್ ತೆರೆಯಲಾಗುವುದು. ಇದರಲ್ಲಿ ಮಂಗಳೂರಿನ ಅಡ್ಯಾರು ಸಹ್ಯಾದ್ರಿ ಕಾಲೇಜು ಕೂಡ ಸೇರಿದೆ. ಎರಡನೇ ಹಂತದಲ್ಲಿ ಇನ್ನೂ 11 ಕಾಲೇಜುಗಳಲ್ಲಿ ಇನ್‌ಕ್ಯುಬೇಶನ್ ಸೆಂಟರ್‌ಗೆ ಅವಕಾಶ ನೀಡಲಾಗುವುದು. ಸಹ್ಯಾದ್ರಿ ಕಾಲೇಜಿನಲ್ಲಿ ಲಭ್ಯವಿರುವ ಮೂಲ ಸೌಕರ್ಯ ಹಾಗೂ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಕಾಲೇಜು ನೀಡುತ್ತಿರುವ ಉತ್ತೇಜನದ ಹಿನ್ನೆಲೆಯಲ್ಲಿ ಸೆಂಟರ್‌ಗೆ ಅವಕಾಶ ನೀಡಲಾಗಿದೆ ಎಂದರು.

**ಸ್ಟಾರ್ಟ್‌ಅಪ್ ಕೇಂದ್ರ:** ನಿರುದ್ಯೋಗ ನಿವಾರಣೆಯ ದೃಷ್ಟಿಯಿಂದ 20 ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಹೇಳಿದ ಗೌರವ್ ಗುಪ್ತಾ, ತ್ಯಾಜ್ಯ ನೀರು, ನೈರ್ಮಲ್ಯ ಮುಂತಾದ ಗಂಭೀರ ಸಮಸ್ಯೆಗಳನ್ನು ಯುವ ಸಮುದಾಯ ತಮ್ಮ ಸಂಶೋಧನೆ ಹಾಗೂ ಆವಿಷ್ಕಾರದ ಮೂಲಕ ಪರಿಹರಿಸಲು ಮುಂದಾಗಬೇಕು. ಸುರತ್ಕಲ್‌ನ ಎನ್ ಐಟಿಕೆ ಹಾಗೂ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಈ ನಿಟ್ಟಿನಲ್ಲಿ ಕಾರ್ಯಪ್ರವೃತವಾಗಬೇಕು ಎಂದು ಅವರು ಹೇಳಿದರು.

ಭಂಡಾರಿ ಫೌಂಡೇಶನ್‌ನ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಗೌರವ ಅತಿಥಿಗಳಾಗಿ ರಸಾಯನ ಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ಪಡೆದ ಅದಾ ಈ ಎನೋಥ್, ಭೌತ ಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಸರ್ಜ್ ಹೊರಾಕೆ, ಕಂಪ್ಯೂಟರ್ ಸೈನ್ಸ್‌ನ ಜೋಸೆಫ್ ಸಿಫಾಕಿಸ್, ಎನ್‌ಐಟಿಕೆ ನಿರ್ದೇಶಕ ಪ್ರೊ. ಕೆ. ಉಮಾ ಮಹೇಶ್ವರ ರಾವ್, ಮಂಗಳೂರು ವಿವಿ ಉಪ ಕುಲಪತಿ ಪ್ರೊ.ಕೆ.ಭೈರಪ್ಪ, ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಯು.ಎಂ.ಭುಶಿ, ನಿರ್ದೇಶಕ ಪ್ರೊ.ಡಿ.ಎಲ್. ಪ್ರಭಾಕರ, ಮುಖ್ಯ ಸಂಯೋಜಕ ಪ್ರೊ.ಸಿ.ಕೆ. ಮಂಜುನಾಥ ಉಪಸ್ಥಿತರಿದ್ದರು.

ಗುರುವಾರ,11 ಜನವರಿ 2018 | ಪುಟಗಳು: 14+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 166
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಅಂತಾರಾಷ್ಟ್ರೀಯ ಸ್ಕೀಯಿಂಗ್: ಭಾರತಕ್ಕೆ ಚೊಚ್ಚಲ ಪದಕ ಗೆದ್ದುಕೊಟ್ಟ ಆಂಚಲ್ ಠಾಕೂರ್ P12

ಆರ್ಥಿಕ ನೆರವು ಸ್ಥಗಿತಕ್ಕೆ ಪ್ರತೀಕಾರವಾಗಿ ಪಾಕಿಸ್ತಾನ ಅಮೆರಿಕಕ್ಕೆ ನೀಡುತ್ತಿದ್ದ ಗುಪ್ತಚರ ಮಾಹಿತಿ ಮತ್ತು ಮಿಲಿಟರಿ ಸಹಕಾರವನ್ನು ಸ್ಥಗಿತಗೊಳಿಸಿದೆ.

ಸೈನಾ ಜೀವನಾಧರಿತ ಚಿತ್ರಕ್ಕೆ ಶ್ರದ್ಧಾ ಕಪೂರ್ ಬದಲಿಗೆ ದೀಪಿಕಾ ನಾಯಕಿ ಸಾಧ್ಯತೆ

# ಒತ್ತಡ ನಿರ್ವಹಣೆಗೆ 2 ತಾಸು ಸ್ವಂತಕ್ಕೆ ಇರಲಿ

## ಸಹ್ಯಾದ್ರಿ ಸಮಾವೇಶ ಸಂವಾದದಲ್ಲಿ ಪ್ರೊ. ಕೆ. ಭೈರಪ್ಪ

■ **ವಿಕ ಸುದ್ದಿಲೋಕ** ಮಂಗಳೂರು

ದಿನದ 24 ಗಂಟೆಗಳಲ್ಲಿ ಎರಡು ತಾಸನ್ನು ಸ್ವಂತಕ್ಕೆ ಇಟ್ಟುಕೊಂಡು ಯೋಗ, ಧ್ಯಾನಗಳನ್ನು ಮಾಡಿದರೆ ಒತ್ತಡ ನಿಭಾಯಿಸಬಹುದು. ಹಿರಿಯ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರು 83 ವರ್ಷವಾಗಿದ್ದರೂ ಇನ್ನೂ ದೇಶಗಳನ್ನು ಸುತ್ತುತ್ತಿದ್ದಾರೆ. ಕೆಲಸದಲ್ಲಿ ಒತ್ತಡವನ್ನು ಕಡಿಮೆ ಮಾಡಿಕೊಂಡದ್ದರಿಂದ ಅವರಿಗದು ಸಾಧ್ಯವಾಗಿದೆ ಎಂದು ಮಂಗಳೂರು ವಿವಿ ಕುಲಪತಿ ಪ್ರೊ. ಕೆ. ಭೈರಪ್ಪ ಹೇಳಿದರು.

ಮಂಗಳೂರಿಗೆ ಹೊರವಲಯದ ಅಡ್ಯಾರಿನಲ್ಲಿ ಏರ್ಪಡಿಸಿದ ವಿಜ್ಞಾನ-ತಂತ್ರಜ್ಞಾನ- ಆಡಳಿತ ಕುರಿತ 5 ದಿನಗಳ 'ಸಹ್ಯಾದ್ರಿ ಸಮಾವೇಶ' ಕೊನೆಯ ದಿನವಾದ ಬುಧವಾರದಂದು ಆಯೋಜನೆಗೊಂಡಿದ್ದ ವಿಜ್ಞಾನಿ-ವೈದ್ಯರು-ಆಡಳಿತಗಾರರ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

**ಜೀವನ ಕ್ರಮ:** ಇಂದು 30 ವರ್ಷ ದಾಟುತ್ತಲೇ ಪ್ರತೀಯೊಬ್ಬರೂ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಜವಾಬ್ದಾರಿಗಳ ಹೆಚ್ಚಳ, ಜೀವನ ಕ್ರಮದ ಬದಲಾವಣೆಯಿಂದ ಹೀಗಾಗುತ್ತಿದೆ. ಇರುವುದರಲ್ಲಿ ತೃಪ್ತಿ ಹೊಂದುವ, ವಿಪರೀತ ಮಹತ್ವಾಕಾಂಕ್ಷೆ ಇಲ್ಲದ ಮನಸ್ಥಿತಿ ರೂಢಿಸಿಕೊಂಡರೆ ಒತ್ತಡವನ್ನು ನಿಭಾಯಿಸಬಹುದು ಎಂದರು.



**ಬೊಜ್ಜು ಸಮಸ್ಯೆ ತೀವ್ರ:** ಆಹಾರ ಪಥ್ಯ ಮತ್ತು ದೈಹಿಕ ಚಟುವಟಿಕೆಗಳಿಂದ ಒತ್ತಡ ನಿಭಾಯಿಸುವುದು ಸಾಧ್ಯವಿದೆ. ಇತ್ತೀಚಿನ ದಿನಗಳಲ್ಲಿ ಬೊಜ್ಜು ಒಂದು ದೊಡ್ಡ ಸಮಸ್ಯೆಯಾಗುತ್ತಿದೆ ಎಂದು ಡಾ. ವೇಣುಗೋಪಾಲ್ ಅಭಿಪ್ರಾಯಪಟ್ಟರು.

**150 ವರ್ಷ ಬದುಕುವುದು ಹೇಗೆ?:** ನೂರೈವತ್ತು ವರ್ಷ ಬದುಕಬೇಕೆಂದಿದೆ ಏನು ಮಾಡಬೇಕು ಹೇಳಿ..? ವಿಜ್ಞಾನಿಗಳಿಗೆ, ವೈದ್ಯರಿಗೆ ಈ ಪ್ರಶ್ನೆ ಕೇಳಿ ಅಚ್ಚರಿಗೊಳಿಸಿದವರು ಬೇರಾರು ಅಲ್ಲ, ಸ್ವತಃ ವಿಜ್ಞಾನಿಯೇ. ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳ ಕಾರ್ಯಕ್ರಮಕ್ಕೆ ಸಮನ್ವಯಕಾರರಾಗಿ ಕಾರ್ಯ ನಿರ್ವಹಿಸಿದ್ದ ಡಾ. ಶಂಕರ ಪ್ರಸಾದ್ ಈ ಪ್ರಶ್ನೆ ಕೇಳಿದಾಗ ಅಲ್ಲಿ ನಗೆಯೂ, ಅಚ್ಚರಿಯೂ ಜತೆಯಾಯಿತು.

ವೈದ್ಯ ಡಾ. ವೇಣು ಗೋಪಾಲ್ ಅವರು 'ಅಂತಹ ಅವಕಾಶ ನಮ್ಮ ತಲೆಮಾರಿನವರಿಗೆ, ಈಗಿನ ತಲೆಮಾರಿನವರಿಗೆ ಸಿಗುವುದು ಕಷ್ಟ, ಆದರೆ

ಮುಂದಿನ ತಲೆಮಾರಿನವರಿಗೆ ಸಿಗಲೂ ಬಹುದು. ಈಗಿನ ಜೀವನ ವಿಧಾನದಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುವುದು ಇದಕ್ಕೆ ಅನಿವಾರ್ಯವಾಗಬಹುದು' ಎಂದರು.

ಸೂಕ್ಷ್ಮ ಜೀವಾಣು ವಿಜ್ಞಾನಿ ದೀಪ್‌ಕ್ಷಿತಾ ಚಕ್ರವರ್ತಿ 'ಗಂಟಲಿನಲ್ಲಿ ನೀರು ಮತ್ತು ಆಹಾರ ಇಳಿಯಬಹುದು ಎಂದಾದರೆ ಆ ಪ್ರಯತ್ನ ಮಾಡಲಡ್ಡಿಯಿಲ್ಲ' ಎಂದು ಉತ್ತರಿಸಿದರು. ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಯೂ ಆಗಿರುವ ಯೋಗಗುರು ಡಾ. ಎಸ್.ಎನ್.ಓಂಕಾರ ಅವರು 'ಯೋಗದಲ್ಲಿ ಪೂರ್ಣಾಯುಷ್ಯ ಎಂದರೆ 120 ವರ್ಷ ಎಂದು ಹೇಳಲಾಗಿದೆ. 150 ವರ್ಷ ಕಷ್ಟ- ಕಷ್ಟ ಎಂದರಲ್ಲದೆ ಪ್ರಯತ್ನಕ್ಕೆ ಅಡ್ಡಿಯಿಲ್ಲ, ಆದರೆ ಈ ಪ್ರಶ್ನೆ ಕೇಳಿದವರನ್ನು ಮೆಚ್ಚಲೇ ಬೇಕು' ಎಂದರು.

>> II

# ಒತ್ತಡ ನಿರ್ವಹಣೆಗೆ 2 ತಾಸು ಇರಲಿ

>> ಮೊದಲ ಪುಟದಿಂದ

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ. ಭೈರಪ್ಪ, ಮಂಗಳೂರು ಕೆಎಂಸಿಯ ಹಿರಿಯ ವೈದ್ಯ ಡಾ. ಆನಂದ ವೇಣುಗೋಪಾಲ್, ಮುಂಬಯಿಯ ಕಮಲೇಶ್ ಮನುಜ, ಬೆಂಗಳೂರಿನ ಪ್ರೊ. ದೀಪ್ ಕ್ಷಿತಾ ಪಾಲ್ಗೊಂಡಿದ್ದರು. ಡಾ. ಎಸ್.ಎನ್. ಓಂಕಾರ್ ಸಮನ್ವಯಕಾರರಾಗಿದ್ದರು.

ನ್ಯಾನೋ ತಂತ್ರಜ್ಞಾನ: ಆರೋಗ್ಯ ಎಂದರೆ ಏನು ಎಂಬ ಪಶ್ನೆಗೆ 'ನ್ಯಾನೋ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಆರೋಗ್ಯ ಇಲ್ಲದಿದ್ದರೆ ಜೀವನವೇ ಇಲ್ಲ, ಅದೊಂದು ಸಂಪತ್ತು' ಎಂದು ಪ್ರೊ. ಭೈರಪ್ಪ ಉತ್ತರಿಸಿದರು. ಆರೋಗ್ಯ ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ ಎಂದು ದೀಪ್ ಕ್ಷಿತಾ ಹೇಳಿದರು. ಡಾ. ವೇಣುಗೋಪಾಲ್ ರೋಗ ಬಾರದಂತೆ ತಡೆಯುವುದೇ ಸದ್ಯದ ಆದ್ಯತೆಯಾಗಬೇಕಿದೆ ಎಂದರು.

ಬಹುತೇಕ ವಿದ್ಯಾರ್ಥಿಗಳು ಓದಿದ್ದು ನೆನಪಿನಲ್ಲಿ ಉಳಿಯುತ್ತಿಲ್ಲ, ಏನು ಮಾಡಬೇಕು? ನೆನಪು ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆಗಳನ್ನಿಟ್ಟರು. ನೆನಪಿನಲ್ಲಿ ಅಲ್ಪಕಾಲೀನ ನೆನಪು ಮತ್ತು ದೀರ್ಘಕಾಲೀನ ನೆನಪು ಎಂಬೆರಡು ವಿಧಗಳಿವೆ. ಅರ್ಥ ಮಾಡಿಕೊಂಡು ಓದಿದರೆ ನೆನಪಿನಲ್ಲಿ ಉಳಿಯುತ್ತದೆ ಎಂದು ಪ್ರೊ. ಭೈರಪ್ಪ ಮತ್ತು ಪ್ರೊ. ದೀಪ್ ಕ್ಷಿತಾ ಉತ್ತರಿಸಿದರು.

ನೆನಪಿಟ್ಟುಕೊಳ್ಳುವ ವಿಧಾನ ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತದೆ, ಅವರಿಗೆ ಬೇಕಾದ ವಿಧಾನವನ್ನು ಅವರವರೇ ರೂಢಿಸಿಕೊಳ್ಳಬೇಕು, ಕೆಲವರು ಚಿತ್ರಗಳ ಮೂಲಕ ನೆನಪಿಟ್ಟುಕೊಳ್ಳುವ ಅಭ್ಯಾಸ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇದಕ್ಕೊಂದು ಸರ್ವೇ ಸಾಮಾನ್ಯವಾದ ವಿಧಾನ ಎಂಬುದಿಲ್ಲ ಎಂದರು.

www.varthabharati.in
ಜನದನಿಯ ಸಾರಥಿ
epaper.varthabh...

# ವಾರ್ತಾ ಭಾರತಿ

ಸತ್ಯ ಎಲ್ಲಿ ಡಗೆ

◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ

11 ಜನವರಿ 2018
ಗುರುವಾರ

VARTHABHARATHI KANNADA DAILY

/Varthabharati REGD.NO: MNG/958/2016-18 RNI NO. KAR KAN/2003/11378 ● ಸಂಪುಟ 15 ● ಸಂಚಿಕೆ 133 ● ಮಂಗಳೂರು ● ಪುಟ 12 ● ಬೆಲೆ ರೂ. 5.00

CENTRAL LIBRARY

For Fine Multi
MAADHYAMA
127 A&B, Industrial Area, Ba
Tel: (0824) 2408545 /

## ಭಾರತೀಯ ವಿದ್ಯಾರ್ಥಿಗಳ ಶೈಕ್ಷಣಿಕ ಆಸಕ್ತಿ ಶ್ಲಾಘನೀಯ: ಆ್ಯಡಾ ಇ. ಯೋನಥ್

- ಸಹ್ಯಾದ್ರಿ: ನೊಬೆಲ್ ವಿಜ್ಞಾನಿಗಳೊಂದಿಗಿನ ಕಾರ್ಯಾಗಾರ ಸಮಾರೋಪ
- ಮಂಗಳೂರು ವಲಯದ ನ್ಯೂ ಇನ್‌ಕ್ಯುಬೇಶನ್ ನೆಟ್‌ವರ್ಕ್ ಕೇಂದ್ರಕ್ಕೆ ಚಾಲನೆ

ಮಂಗಳೂರು, ಜ.10: ಭಾರತದ ವಿದ್ಯಾರ್ಥಿಗಳ ಶೈಕ್ಷಣಿಕ ಆಸಕ್ತಿ, ಕುತೂಹಲದ ಬಗ್ಗೆ ಮೆಚ್ಚುಗೆಯಾಗಿದೆ. ಈ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಹೊಸ ಸಾಧನಗಳ ಆವಿಷ್ಕಾರ, ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತಾಗಲಿ ಎಂದು ವಿಜ್ಞಾನದಲ್ಲಿ (1968) ನೊಬೆಲ್ ಪ್ರಶಸ್ತಿ ವಿಜೇತ ಆ್ಯಡಾ ಇ. ಯೋನಥ್ ತಿಳಿಸಿದ್ದಾರೆ.

ಸಹ್ಯಾದ್ರಿ ತಾಂತ್ರಿಕ ಮತ್ತು ಆಡಳಿತ ಮಹಾವಿದ್ಯಾಲಯದಲ್ಲಿ ಐದು ದಿನಗಳ ಕಾಲ ಆಯೋಜಿಸಲಾಗಿದ್ದ 'ಸಹ್ಯಾದ್ರಿ ಕಾಂಕ್ಲೇವ್' ಸಮಾರೋಪ ಮತ್ತು ಮಂಗಳೂರು ವಲಯದ ನ್ಯೂ ಏಜ್ ಇನ್‌ಕ್ಯೂಬೆಶನ್ ನೆಟ್‌ವರ್ಕ್ ಚಾಲನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಂದ ಆಶ್ಚರ್ಯವಾಯಿತು. ಇಂತಹ ಕಾರ್ಯಾಗಾರಗಳಲ್ಲಿ ಪಡೆಯುವ ಅನುಭವ ವಿದ್ಯಾರ್ಥಿಗಳು ಸಾಧನೆ ಮಾಡಲು ಪ್ರೇರಣೆಯಾಗಲಿ ಎಂದು ಆ್ಯಡಾ ಇ.ಯೋನಥ್ ತಿಳಿಸಿದ್ದಾರೆ.

★**ಸ್ವ ಚಿಂತನೆ, ವಿಶ್ಲೇಷಣೆ ಅಗತ್ಯ:** ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಸರ್ಜ್ ಹ್ಯಾರೋಶ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಮುಂದಿನ




ಬದುಕಿನಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎಂಬುದರ ಬಗ್ಗೆ ಸ್ವ ಚಿಂತನೆ ಮಾಡಬೇಕು. ವೃತ್ತಿ ಬದುಕಿನಲ್ಲಿ ಜಗತ್ತನ್ನು ತಮ್ಮದೇ ಹೊಸ ದೃಷ್ಟಿಕೋನದಿಂದ ನೋಡುವುದು ಅಗತ್ಯವಿದೆ ಎಂದರು.

★**ನ್ಯೂಏಜ್ ಇನ್‌ಕ್ಯೂಬೇಶನ್ ನೆಟ್‌ವರ್ಕ್‌ಗೆ ಚಾಲನೆ:** ಇದೇ ಸಂದರ್ಭ ಸಹ್ಯಾದ್ರಿ ಮಹಾವಿದ್ಯಾಲಯದ ಆವರಣದಲ್ಲಿ ನ್ಯೂಏಜ್ ಇನ್‌ಕ್ಯೂಬೇಶನ್ ನೆಟ್‌ವರ್ಕ್‌ನ್ನು ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ ಉದ್ಘಾಟಿಸಿ ಮಾತನಾಡುತ್ತಾ, ಕರ್ನಾಟಕ ಸರಕಾರದ ಐ.ಟಿ., ಬಿ.ಟಿ. ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಯ ವತಿಯಿಂದ ಮಂಗಳೂರು ವಲಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಸಂಶೋಧನೆ ವಿಜ್ಞಾನದ ಪ್ರಯೋಗಕ್ಕೆ ಪೂರಕವಾದ ಮೂಲಭೂತ ಸೌಕರ್ಯ ಒದಗಿಸಲು ಈ ಕೇಂದ್ರವನ್ನು ಸದುಪಯೋಗಪಡಿಸಿಕೊಳ್ಳಬಹುದು ಎಂದರು.

ಕರ್ನಾಟಕ ಸರಕಾರ ವಿದ್ಯಾರ್ಥಿಗಳ ಸಂಶೋಧನಾ ಚಟುವಟಿಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಬೆಳೆಯುತ್ತಿರುವ ವಾಹನ ದಟ್ಟನೆ, ಸರಕು ಸಾಗಾಟ, ಕೃಷಿ ಕ್ಷೇತ್ರದ ರೋಗ ಗಳ ಬಗ್ಗೆ, ಆರೋಗ್ಯ ರಕ್ಷಣೆಯ ಸಮಸ್ಯೆಗಳ ಬಗ್ಗೆ ಹೆಚ್ಚಿನ ಸಂಶೋಧನೆಗೆ ಯುವ ವಿದ್ಯಾರ್ಥಿಗಳು ಆಸಕ್ತಿ ವಹಿಸಲು ಪೂರಕವಾದ ಕೇಂದ್ರಗಳನ್ನು ಹಾಗೂ ಅನುದಾನವನ್ನು ನೀಡಲಾಗುತ್ತಿದೆ ಎಂದು ಗೌರವ ಗುಪ್ತ ತಿಳಿಸಿದರು.

₹ 5
ಸಂಪುಟ: 2 ಸಂಚಿಕೆ: 360 ಪುಟಗಳು: 12+4
11.01.2018 ಗುರುವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ

@vishwavaninews
vishwavanitimely
epaper.vishwavani.news
vishwavani.news

ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ಗುರು
ವಿವೇಕಾನಂದತ್ವದಿಂದ
ಪರಿಪೂರ್ಣ ವ್ಯಕ್ತಿತ್ವ

ದಾರಿದೀಪೋಕ್ತಿ
ಎಲ್ಲವೂ ನೀವು ಅಂದುಕೊಂಡಂತೆ ನಡೆದಾಗ 'ನಾನು ಸಂತಸವಾಗಿದ್ದೇನೆ' ಎಂದು ಹೇಳುವುದು ದೊಡ್ಡದಲ್ಲ. ನೀವು ಅಂದುಕೊಂಡಂತೆ ನಡೆಯದಿದ್ದಾಗಲೂ ಹಾಗೇ ಹೇಳುವುದು ದೊಡ್ಡದು. ಎಲ್ಲ ಸಂದರ್ಭಗಳಲ್ಲೂ ಸಮಚಿತ್ತ ಕಾಪಾಡಿಕೊಳ್ಳುವುದು ಮುಖ್ಯ.

ವಿಶ್ವವಾಣಿ
ವಿಶ್ವಾಸವೇ ವಿಶ್ವ



'ಸಹ್ಯಾದ್ರಿ ಸಮಾವೇಶ' ದಲ್ಲಿ ನೀರು ಮತ್ತು ಬೆಳಕು ವಿಷಯ ಕುರಿತು ಭೌತ ವಿಜ್ಞಾನಿ ಸರ್ಜ್ ಹಾರೋಕಿ ಉಪನ್ಯಾಸ

# ತಂತ್ರಜ್ಞಾನಕ್ಕೆ ವಿಜ್ಞಾನ ಸಂಶೋಧನೆಯೇ ಅಡಿಗಲ್ಲು

**ವಿಶ್ವವಾಣಿ ಸುದ್ದಿಮನೆ** ಮಂಗಳೂರು



ನೊಬೆಲ್ ಪುರಸ್ಕೃತ ವಿಜ್ಞಾನಿ ಸರ್ಜ್ ಹಾರೋಕಿ ಅಡ್ಯಾರಿನ ಸಹ್ಯಾದ್ರಿ ಕಾಲೇಜಿನಲ್ಲಿ ನಡೆದ ಸಮ್ಮೇಳನದಲ್ಲಿ ವಿಚಾರ ಮಂಡಿಸಿದರು.

ಜನಜೀವನವನ್ನು ಸುಲಭಗೊಳಿಸಿರುವುದರ ಹಿಂದೆ ಮೂಲವಿಜ್ಞಾನದ ಸಂಶೋಧನೆಗಳು ಮಹತ್ವದ ಪಾತ್ರವಹಿಸಿದೆ ಎಂದು ನೊಬೆಲ್ ಪುರಸ್ಕೃತ ಭೌತ ವಿಜ್ಞಾನಿ ಸರ್ಜ್ ಹಾರೋಕಿ ಹೇಳಿದರು.

ಮಂಗಳೂರಿನ ಅಡ್ಯಾರಿನ ಸಹ್ಯಾದ್ರಿ ಕಾಲೇಜಿನಲ್ಲಿ 5 ದಿನಗಳ ವಿಜ್ಞಾನ-ತಂತ್ರಜ್ಞಾನ, ಆಡಳಿತ ಕುರಿತಾದ ''ಸಹ್ಯಾದ್ರಿ ಸಮಾವೇಶ''ದಲ್ಲಿ ನೀರು ಮತ್ತು ಬೆಳಕು ವಿಷಯ ಕುರಿತು ಮಾತನಾಡಿದರು.

ಮನುಷ್ಯನ ಇರುವಿಕೆಯಲ್ಲಿ ನೀರು ಮತ್ತು ಬೆಳಕಿನ ಪಾತ್ರ ಮಹತ್ವದ್ದು, ಆರಂಭದಲ್ಲಿ ಕುತೂಹಲಕ್ಕೆಂದು ಆರಂಭಗೊಂಡ ಸಂಶೋಧನೆ ಇಂದು ಎಂಆರ್‌ಐಯನ್ನು ಕಂಡುಹಿಡಿದಿದೆ. ಬೆಳಕಿಗೆ ಸಂಬಂಧಿಸಿದಂತೆ ನ್ಯೂಟನ್, ಮ್ಯಾಕ್ಸ್ ವೆಲ್ ಅವರು ಕೈಗೊಂಡ ಸಂಶೋಧನೆಗಳು ಇಂದಿನ ಅವಿಷ್ಕಾರಗಳಿಗೆ ಮೂಲ ಎಂದರು.

ಮನುಷ್ಯ ದೇಹದ ಅಂಗಾಂಗಗಳ ಪ್ರತಿಬಿಂಬವನ್ನು ತೆಗೆಯಲು ಬಳಸುವ ಎಂಆರ್‌ಐ ರೋಗ ಪತ್ತೆಗೆ ಸಹಕಾರಿಯಾಗಿದೆ. ಪ್ರಕೃತಿಯ ಬಗ್ಗೆ ಬರೇ ಕುತೂಹಲದಿಂದ ವೀಕ್ಷಣೆಯ ಮೂಲಕ ಆರಂಭಗೊಂಡ ಸಂಶೋಧನೆ ತನ್ನ ದೀರ್ಘಕಾಲೀನ ಪಯಣದಲ್ಲಿ ಸಿದ್ಧಾಂತಗಳನ್ನು ಪ್ರತಿಪಾದಿಸಿ, ಆ ಬಳಿಕ ಅವುಗಳ ಬಗ್ಗೆ ಊಹನೆಗಳನ್ನು ಮಾಡಿ ಅಂತಿಮವಾಗಿ ಫಲಿತವನ್ನು ಕಾಣುವಾಗ ಶತಮಾನವೇ ಸಂದಿದೆ. ಇಂದು ಬಳಕೆಯಲ್ಲಿರುವ ಲೇಸರ್ ''ಅತ್ಯುತ್ತಮವಾಗಿ ಪಳಗಿಸಿದ ಬೆಳಕು'' ಎಂದೂ ಅವರು ಅಭಿಪ್ರಾಯಪಟ್ಟರು.

19-20 ನೇ ಶತಮಾನದಲ್ಲಿ ಮೂಲ ವಿಜ್ಞಾನ ಸಂಶೋಧನೆ ಕೈಗೊಂಡ ವಿಜ್ಞಾನಿಗಳಿಗೆ ತಮ್ಮ ಸಂಶೋಧನೆ ಯಾವ ರೀತಿಯಲ್ಲಿ ಮನುಷ್ಯರಿಗೆ ಉಪಯೋಗಕ್ಕೆ ಬರಬಹುದು ಎಂಬ ಬಗ್ಗೆ ಅರಿವಿರಲಿಲ್ಲ. ಮ್ಯಾಕ್ಸ್ ವೆಲ್ ಬೆಳಕನ್ನು ವಿದ್ಯುತ್ ಕಾಂತೀಯ ಅಲೆಗಳೆಂದು ಹೇಳಿದ, ಹರ್ಟ್ಜ್ ರೇಡಿಯೋ ಅಲೆಗಳೆಂದ, ರಾಂಟಜನ್ ಎಕ್ಸ್ ರೇಗಳನ್ನು ಹುಡುಕಿದ. ಇವೆಲ್ಲದರ ಒಟ್ಟು ಪರಿಣಾಮವಾಗಿ ತಂತ್ರಜ್ಞಾನದಲ್ಲಿ ಕ್ರಾಂತಿಯಾಯಿತು ಎಂದು ಹೇಳಿದರು.

20ನೇ ಶತಮಾನದ ಆದಿಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಅಣು ಗಡಿಯಾರಗಳ ಸಾಧ್ಯತೆಯನ್ನು ಊಹಿಸಿರಲಿಲ್ಲ, ಇಂದು ಅಣು ಗಡಿಯಾರಗಳು ಬಂದಿವೆ. ಜಿಪಿಎಸ್., ಎಂಆರ್‌ಐ ಸ್ಕ್ಯಾನರ್ ಗಳು ಮನುಷ್ಯನ ಸೇವೆಗೆ ಲಭ್ಯವಾಗಿವೆ. ಇವಕ್ಕೆಲ್ಲ ಮ್ಯಾಕ್ಸ್ ವೆಲ್, ಹರ್ಟ್ಜ್, ರಾಂಟಜೆನ್, ಸ್ಟರ್ನ್ ಮೊದಲಾದವರ ಸಂಶೋಧನೆಗಳು ಮೂಲ ಎಂದವರು ವಿಜ್ಞಾನದ ಚರಿತ್ರೆಯನ್ನು ಅವಲೋಕಿಸಿದರು. ಭಂಡಾರಿ ಪ್ರತಿಷ್ಠಾನದ ಅಧ್ಯಕ್ಷ ಮಂಜುನಾಥ ಭಂಡಾರಿ ಇದ್ದರು.

₹ 5
ಸಂಪುಟ: 2 ಸಂಚಿಕೆ: 360 ಪುಟಗಳು: 12+4
11.01.2018 ಗುರುವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ಗುರು
ವಿವೇಕಾನಂದತ್ವದಿಂದ
ಪರಿಪೂರ್ಣ ವ್ಯಕ್ತಿತ್ವ

ದಾರಿದೀಪೋಕ್ತಿ

ಎಲ್ಲವೂ ನೀವು ಅಂದುಕೊಂಡಂತೆ ನಡೆದಾಗ 'ನಾನು ಸಂತಸವಾಗಿದ್ದೇನೆ' ಎಂದು ಹೇಳುವುದು ದೊಡ್ಡದಲ್ಲ. ನೀವು ಅಂದುಕೊಂಡಂತೆ ನಡೆಯದಿದ್ದಾಗಲೂ ಹಾಗೇ ಹೇಳುವುದು ದೊಡ್ಡದು. ಎಲ್ಲ ಸಂದರ್ಭಗಳಲ್ಲೂ ಸಮಚಿತ್ತ ಕಾಪಾಡಿಕೊಳ್ಳುವುದು ಮುಖ್ಯ.

# ವಿಶ್ವವಾಣಿ

ವಿಶ್ವಾಸವೇ ವಿಶ್ವ



ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಮಂಗಳೂರು ವಲಯದಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ ಮೂಲ ಸೌಲಭ್ಯ ಕಲ್ಪಿಸುವ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ ಸೆಂಟರ್ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಪ್ರವಾಸೋದ್ಯಮ ಇಲಾಖೆಯ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಉದ್ಘಾಟಿಸಿದರು. ಸಹ್ಯಾದ್ರಿ ಕಾಲೇಜಿನ ಅಧ್ಯಕ್ಷ ಮಂಜುನಾಥ್ ಭಂಡಾರಿ, ಪ್ರಾಂಶುಪಾಲ ಉಮೇಶ್ ಭುಷಿ ಇದ್ದರು.

ಸಂಪುಟ Volume 59 | ಸಂಚಿಕೆ Issue 327 | ಪುಟ Pages 12+4
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru

# ಸಂಯುಕ್ತ ಕರ್ನಾಟಕ

samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು

ಗುರುವಾರ 11 Wednesday | ಜನವರಿ 2018 January | ₹5-00



ಕೋಲ್ಕತ್ತಾದ ಬೆಹಲಾ ಶಾಸ್ತ್ರೀಯ ಉತ್ಸವದಲ್ಲಿ ಉಸ್ತಾದ್ ಅಮ್ಜದ್‌ಅಲಿಖಾನ್ ಅವರು ಸರೋದ್ ನುಡಿಸಿದ ಕ್ಷಣ.

ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಬುಧವಾರ ಭಾರತೀಯ ಮೂಲದ ಸಂಸದರ ಸಮ್ಮೇಳನದಲ್ಲಿ ಭಾಷಣ ಮಾಡಿದ ಸಂದರ್ಭ.

# ನೂರೈವತ್ತು ವರ್ಷ ಬದುಕಲೇನು ಮಾಡಬೇಕು?

## ವಿಜ್ಞಾನಿ ಪ್ರಶ್ನೆಗೆ ಸಭಿಕರು ಚಕಿತ



**ಮಂಗಳೂರು:** ನೂರೈವತ್ತು ವರ್ಷ ಬದುಕಬೇಕೆಂದಿದೆ ಏನು ಮಾಡಬೇಕು ಹೇಳಿ? ವಿಜ್ಞಾನಿಗಳಿಗೆ, ವೈದ್ಯರಿಗೆ ಈ ಪ್ರಶ್ನೆ ಕೇಳಿ ಅಚ್ಚರಿಗೊಳಿಸಿದವರು ಬೇರಾರೂ ಅಲ್ಲ. ಸ್ವತಹ ವಿಜ್ಞಾನಿಯೇ.

ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳ ಕಾರ್ಯಕ್ರಮಕ್ಕೆ ಸಮನ್ವಯಕಾರರಾಗಿ ಕಾರ್ಯನಿರ್ವಹಿಸಿದ್ದ ಡಾ. ಶಂಕರ ಪ್ರಸಾದ್. ಈ ಪ್ರಶ್ನೆ ಕೇಳಿದಾಗ ಅಲ್ಲಿ ನಗೆಯೂ, ಅಚ್ಚರಿಯೂ ಜತೆಯಾಯಿತು.

ಮಂಗಳೂರಿಗೆ ಹೊರವಲಯದ ಅಡ್ಯಾರಿನಲ್ಲಿ ಏರ್ಪಟ್ಟ ವಿಜ್ಞಾನ-ತಂತ್ರಜ್ಞಾನ-ಆಡಳಿತ ಕುರಿತ 5 ದಿನಗಳ 'ಸಹ್ಯಾದ್ರಿ ಸಮಾವೇಶ' ಕೊನೆಯ ದಿನವಾದ ಬುಧವಾರ ಆಯೋಜನೆಗೊಂಡಿದ್ದ ವಿಜ್ಞಾನಿ-ವೈದ್ಯರು-ಆಡಳಿತಗಾರರ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಲಿಖಿತ ಮೂಲಕ ಡಾ. ಶಂಕರ ಪ್ರಸಾದ್ ಕೇಳಿದ ಈ ಪ್ರಶ್ನೆ ವೇದಿಕೆಯಲ್ಲಿದ್ದವರಲ್ಲದೆ, ಸಭಿಕರನ್ನೂ ಚಕಿತಗೊಳಿಸಿತು.

ವೈದ್ಯ ಡಾ. ವೇಣು ಗೋಪಾಲ್ ಅವರು 'ಅಂತಹ ಅವಕಾಶ ನಮ್ಮ ತಲೆಮಾರಿನವರಿಗೆ, ಈಗಿನ ತಲೆಮಾರಿನವರಿಗೆ ಸಿಗುವುದು ಕಷ್ಟ, ಆದರೆ ಮುಂದಿನ ತಲೆಮಾರಿನವರಿಗೆ ಸಿಗಲೂಬಹುದು. ಈಗಿನ ಜೀವನ ವಿಧಾನದಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುವುದು ಇದಕ್ಕೆ ಅನಿವಾರ್ಯವಾಗಬಹುದು ಎಂದರು.

ಸೂಕ್ಷ್ಮಜೀವಾಣು ವಿಜ್ಞಾನಿ ದೀಪ್‌ಕ್ಷಿತಾ ಚಕ್ರವರ್ತಿ 'ಗಂಟಲಿನಲ್ಲಿ ನೀರು ಮತ್ತು ಆಹಾರ ಇಳಿಯಬಹುದು ಎಂದಾದರೆ ಆ ಪ್ರಯತ್ನ ಮಾಡಲಡ್ಡಿಯಿಲ್ಲ' ಎಂದುತ್ತರಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ. ಭೈರಪ್ಪ, ಮಂಗಳೂರು ಕೆಎಂಸಿಯ ಹಿರಿಯ ವೈದ್ಯ ಡಾ. ಆನಂದ ವೇಣು ಗೋಪಾಲ್, ಮುಂಬಯಿಯ ಕಮಲೇಶ್ ಮನುಜ, ಬೆಂಗಳೂರಿನ ಪ್ರೊ. ದೀಪ್ ಕ್ಷಿತಾ ಪಾಲ್ಗೊಂಡಿದ್ದ ಈ ಕಾರ್ಯಕ್ರಮಕ್ಕೆ ಡಾ. ಎಸ್. ಎನ್. ಓಂಕಾರ್ ಸಮನ್ವಯಕಾರರಾಗಿದ್ದರು.

### ಪ್ರಯತ್ನಕ್ಕೆ ಅಡ್ಡಿ ಇಲ್ಲ

'ಯೋಗದಲ್ಲಿ ಪೂರ್ಣಾಯುಷ್ಯ ಎಂದರೆ 120 ವರ್ಷ ಎಂದು ಹೇಳಲಾಗಿದೆ. 150 ವರ್ಷ ಬದುಕುವುದು ಕಷ್ಟ ಆದರೆ ಪ್ರಯತ್ನಕ್ಕೆ ಅಡ್ಡಿಯಿಲ್ಲ.

—ಡಾ. ಎಸ್.ಎನ್. ಓಂಕಾರ
ವಿಜ್ಞಾನಿ, ಯೋಗಗುರು

ಆರೋಗ್ಯ ಎಂದರೆ ಏನು ಎಂಬ ಪಶ್ನೆಗೆ 'ನ್ಯಾನೋ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಆರೋಗ್ಯ ಇಲ್ಲದಿದ್ದರೆ ಜೀವನವೇ ಇಲ್ಲ, ಅದೊಂದು ಸಂಪತ್ತು' ಎಂದು ಪ್ರೊ. ಭೈರಪ್ಪ ಉತ್ತರಿಸಿದರು. ಆರೋಗ್ಯ ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ ಎಂದು ದೀಪ್ ಕ್ಷಿತಾ ಹೇಳಿದರು. ಡಾ. ವೇಣುಗೋಪಾಲ್ ರೋಗ ಬಾರದಂತೆ ತಡೆಯುವುದೇ ಸದ್ಯದ ಆದ್ಯತೆಯಾಗಬೇಕಿದೆ ಎಂದರು.

ಸಂಪುಟ 59 Volume 59 | ಸಂಚಿಕೆ 327 Issue 327 | ಪುಟ 12+4 Pages
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru

# ಸಂಯುಕ್ತ ಕರ್ನಾಟಕ

samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು

ಗುರುವಾರ 11 Wednesday | ಜನವರಿ 2018 January | ₹5–00


ಕೋಲ್ಕತ್ತಾದ ಬೆಹಲಾ ಶಾಸ್ತ್ರೀಯ ಉತ್ಸವದಲ್ಲಿ ಉಸ್ತಾದ್ ಅಹ್ಮದ್‌ಅಲಿಖಾನ್ ಅವರು ಸರೋದ್ ನುಡಿಸಿದ ಕ್ಷಣ.

ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಬುಧವಾರ ಭಾರತೀಯ ಮೂಲದ ಸಂಸದರ ಸಮ್ಮೇಳನದಲ್ಲಿ ಭಾಷಣ ಮಾಡಿದ ಸಂದರ್ಭ.



ಮಂಗಳೂರು: ರಾಜ್ಯ ಸರ್ಕಾರ ಮತ್ತು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಮಂಗಳೂರು ವಲಯದಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ ಮೂಲ ಸೌಲಭ್ಯ ಕಲ್ಪಿಸುವ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ ಸೆಂಟರ್ ಸ್ಥಾಪನೆಗೆ ಅನುಮೋದನೆ ನೀಡಿದ್ದು, ನ್ಯೂ ಏಜ್ ಇನ್‌ಕ್ಯುಬೇಷನ್ ಸೆಂಟರ್ ಅನ್ನು ಮಾಹಿತಿ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಇಲಾಖೆಯ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಉದ್ಘಾಟಿಸಿದರು. ಸಹ್ಯಾದ್ರಿ ಕಾಲೇಜಿನ ಅಧ್ಯಕ್ಷ ಮಂಜುನಾಥ್ ಭಂಡಾರಿ ಉಪಸ್ಥಿತರಿದ್ದರು.

ಮುಂಜಾನೆ ಮಾತು

ಅರಿಸಿಕೊಳ್ಳುವ ಅವಕಾಶಗಳಿದ್ದಾಗ ಒಳ್ಳೆಯದನ್ನೇ ಆರಿಸಿಕೊಳ್ಳೋಣ, ಅವಕಾಶಗಳಿಲ್ಲದಿದ್ದಾಗ ಸಿಕ್ಕಿದ್ದನ್ನೇ ಸರಿಯಾಗಿ ಬಳಸಿಕೊಳ್ಳೋಣ. ಆಯ್ಕೆ ಮತ್ತು ಅವಕಾಶಗಳಲ್ಲಿ ವಿವೇಚನೆ ಬಳಸೋಣ.

# ವಿಜಯವಾಣಿ

ನಂ.1 ಕನ್ನಡ ದಿನಪತ್ರಿಕೆ

ಕನ್ನಡಿಗರ ಧ್ವನಿ

2018 ಹೊಸ ವರುಷ ತರಲಿ ಹರುಷ



ಬೆಂಗಳೂರು ● ಮಂಗಳೂರು ● ಹುಬ್ಬಳ್ಳಿ ● ವಿಜಯಪುರ ● ಮೈಸೂರು ● ಗಂಗಾವತಿ ● ಚಿತ್ರದುರ್ಗ ● ಶಿವಮೊಗ್ಗ ● ಕಲಬುರಗಿ ● ಬೆಳಗಾವಿ   VIJAYAVANI ● MANGALURU   ಮಂಗಳೂರು ● ಸಂಪುಟ 6 ● ಸಂಚಿಕೆ 283

vijayavani.net   ಇ-ಪೇಪರ್: epapervijayavani.in   VVani4U   @VVANI4U   vijayavaninews@gmail.com   ಸಹಾಯವಾಣಿ: 8884411682   11 ಜನವರಿ 2018 | ಗುರುವಾರ   11 JANU

CENTRAL LIBRARY

# ವಿಜ್ಞಾನ ಸಮಸ್ಯೆಗಳಿಗೆ ವಿಜ್ಞಾನದಿಂದಲೇ ಪರಿಹಾರ

■ ವಿಜಯವಾಣಿ ಸುದ್ದಿಜಾಲ ಸುರತ್ಕಲ್

ವಿಶ್ವದಲ್ಲಿ ತಾಪಮಾನ ಏರಿಕೆ, ಹವಾಮಾನ ಬದಲಾವಣೆ ಮೊದಲಾದ ಸಮಸ್ಯೆ, ಲಾಭ ಗಳಿಕೆಗೆ ವಿಜ್ಞಾನದ ಬಳಕೆ ಕಾರಣವಾಗಿದೆ. ಇದಕ್ಕೆ ಪರಿಹಾರವನ್ನೂ ವಿಜ್ಞಾನವೇ ರೂಪಿಸಬೇಕು ಎಂದು ನೊಬೆಲ್ ಪ್ರಶಸ್ತಿ ವಿಜೇತ ಫ್ರಾನ್ಸ್‌ನ ಪ್ರೊ. ಸರ್ಜ್ ಹೆರೋಚ್ ಹೇಳಿದರು.

**» ಎನ್‌ಐಟಿಕೆ ಹೊಸ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಪ್ರೊ. ಸರ್ಜ್ ಹೆರೋಚ್ ಹೇಳಿಕೆ**

ಎನ್‌ಐಟಿಕೆಯಲ್ಲಿ ಕೆಮಿಕಲ್ ಇಂಜಿನಿಯರಿಂಗ್ ಮತ್ತು ಅಪ್ಲೈಡ್ ಮೆಕಾನಿಕ್ ವಿಭಾಗಳ ಹೊಸ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿದ ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವಿಜ್ಞಾನದ ಬಳಕೆಯಿಂದ ಜನರ ಜೀವನ ಬದಲಾವಣೆಯಾಗಿದೆ. ವಿಶ್ವದ ಪ್ರಗತಿಗೆ ತಾಂತ್ರಿಕತೆ ಬಳಕೆ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಭೌತಶಾಸ್ತ್ರ ಸೇರಿದಂತೆ ವಿಜ್ಞಾನದ ಕೊಡುಗೆ ಅಪಾರ. ಕಂಪ್ಯೂಟರ್, ಮೊಬೈಲ್ ಮೊದಲಾದ ಕ್ಷೇತ್ರಗಳಲ್ಲಿ ಭೌತಶಾಸ್ತ್ರದ ಕೊಡುಗೆ ಹಿರಿದು. ವಿಜ್ಞಾನಿಗಳು ಮೆಡಿಸಿನ್ ಮೊದಲಾದ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿ ದೇಶಕ್ಕೆ ಕೊಡುಗೆ ನೀಡಬೇಕು ಎಂದರು.



ಎನ್‌ಐಟಿಕೆಯಲ್ಲಿ ಹೊಸ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ನೊಬೆಲ್ ಪ್ರಶಸ್ತಿ ವಿಜೇತರಾದ ಪ್ರೊ.ಸರ್ಜ್ ಹೆರೋಚ್, ಪ್ರೊ. ಅಲಾ ಯುನಾ ಭಾಗವಹಿಸಿದ್ದರು.

2009ರಲ್ಲಿ ಕೆಮಿಸ್ಟ್ರಿ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಇಸ್ರೇಲ್‌ನ ಪ್ರೊ.ಅಲಾ ಯುನಾ ಮಾತನಾಡಿದರು. ಎನ್‌ಐಟಿಕೆ ನಿರ್ದೇಶಕ ಪ್ರೊ.ಉಮಾಮಹೇಶ್ವರರಾವ್, ಮಂಗಳೂರಿನ ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ, ಎನ್‌ಐಟಿಕೆ ಯ ವಿವಿಧ ವಿಭಾಗಾಧಿಕಾರಿಗಳು ಭಾಗವಹಿಸಿದ್ದರು.

ಮುಂಜಾನೆ ಮಾತು
ಅರಿಸಿಕೊಳ್ಳುವ ಅವಕಾಶಗಳಿದ್ದಾಗ ಒಳ್ಳೆಯದನ್ನೇ ಆರಿಸಿಕೊಳ್ಳೋಣ, ಅವಕಾಶಗಳಿಲ್ಲದಿದ್ದಾಗ ಸಿಕ್ಕಿದ್ದನ್ನೇ ಸರಿಯಾಗಿ ಬಳಸಿಕೊಳ್ಳೋಣ. ಆಯ್ಕೆ ಮತ್ತು ಅವಕಾಶಗಳಲ್ಲಿ ವಿವೇಚನೆ ಬಳಸೋಣ.

ವಿಜಯವಾಣಿ
ಕನ್ನಡಿಗರ ಧ್ವನಿ · 2018 ಹೊಸ ವರುಷ ತರಲಿ ಹರುಷ · No.1* ಕನ್ನಡ ದಿನಪತ್ರಿಕೆ

ಬೆಂಗಳೂರು · ಮಂಗಳೂರು · ಹುಬ್ಬಳ್ಳಿ · ವಿಜಯಪುರ · ಮೈಸೂರು · ಗಂಗಾವತಿ · ಚಿತ್ರದುರ್ಗ · ಶಿವಮೊಗ್ಗ · ಕಲಬುರಗಿ · ಬೆಳಗಾವಿ · VIJAYAVANI ● MANGALURU · ಮಂಗಳೂರು ● ಸಂಪುಟ 6 ● ಸಂಚಿಕೆ 283
vijayavani.net · ಇ-ಪೇಪರ್: epapervijayavani.in · VVani4U · @VVANI4U · vijayavaninews@gmail.com · ಸಹಾಯವಾಣಿ: 8884411682 · 11 ಜನವರಿ 2018 | ಗುರುವಾರ · 11 JANU

CENTRAL LIBRARY

# ಇನ್‌ಕ್ಯುಬೇಶನ್ ನೆಟ್‌ವರ್ಕ್ ವಿಸ್ತರಣೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಬೆಂಗಳೂರು ರಾಜ್ಯದ ಐಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಕೇಂದ್ರ ಸ್ಥಾನವಾಗಿದ್ದು, ಇತರ ಜಿಲ್ಲೆಗಳಿಗೂ ಇದನ್ನು ವಿಸ್ತರಿಸುವ ಉದ್ದೇಶದಿಂದ ನ್ಯೂ ಏಜ್ ಇನ್‌ಕ್ಯುಬೇಶನ್ ನೆಟ್‌ವರ್ಕ್-(ಎನ್‌ಏಐಎನ್)ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ರಾಜ್ಯ ಸರ್ಕಾರದ ಐಟಿ, ಬಿಟಿ ಮತ್ತು ಪ್ರವಾಸೋದ್ಯಮ ಇಲಾಖೆ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿದರು.

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ 5 ದಿನಗಳ ಕಾಲ ನಡೆದ ವಿಜ್ಞಾನ, ತಂತ್ರಜ್ಞಾನ ಮತ್ತು ಮ್ಯಾನೇಜ್‌ಮೆಂಟ್ ಕುರಿತ ಸಹ್ಯಾದ್ರಿ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಬುಧವಾರ ಮಾತನಾಡಿದರು.

ಇನ್‌ಕ್ಯುಬೇಶನ್ ನೆಟ್‌ವರ್ಕ್‌ಗೆ ರಾಜ್ಯದಲ್ಲಿ ಒಟ್ಟು 20 ಕಾಲೇಜುಗಳನ್ನು ಆಯ್ಕೆ ಮಾಡಲಾಗಿದ್ದು, ಮಂಗಳೂರಿನಲ್ಲಿ ಸಹ್ಯಾದ್ರಿ ಕಾಲೇಜು ಅವುಗಳಲ್ಲಿ ಒಂದಾಗಿದೆ. ಮೊದಲ ಹಂತದಲ್ಲಿ 9 ಹಾಗೂ ಎರಡನೇ ಹಂತದಲ್ಲಿ 11 ಕಾಲೇಜುಗಳಲ್ಲಿ ಇನ್‌ಕ್ಯುಬೇಶನ್ ನೆಟ್‌ವರ್ಕ್ ಆರಂಭವಾಗಲಿದೆ. ಇಲ್ಲಿ ಇಂಜಿನಿಯರಿಂಗ್ ಪ್ರಾಜೆಕ್ಟ್‌ಗಳ ಜತೆಗೆ, ಸಮಾಜದ ವಿವಿಧ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ.


ವಿಜಯವಾಣಿ ಚಿತ್ರ

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಸಹ್ಯಾದ್ರಿ ಸಮಾವೇಶ ಸಮಾರೋಪದಲ್ಲಿ ರಾಜ್ಯ ಸರ್ಕಾರದ ಐಟಿ, ಬಿಟಿ ಮತ್ತು ಪ್ರವಾಸೋದ್ಯ ಇಲಾಖೆ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಮಾತನಾಡಿದರು.

ಯುವಸಮುದಾಯ ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಯನ ಮೂಲಕ ಸಂಚಾರ ಮತ್ತು ಸಾಗಾಣೆ, ತ್ಯಾಜ್ಯ ನೀರು, ನೈರ್ಮಲ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು, ರೋಗಗಳನ್ನು ಶೀಘ್ರ ಪತ್ತೆ ಹಚ್ಚುವುದರ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರುವುದು, ಕೃಷಿ ಸಂಬಂಧಿಸಿ ಹೊಸ ತಂತ್ರಜ್ಞಾನ ಕಂಡುಹಿಡಿಯುವುದು, ಶಿಕ್ಷಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆ ಮಾಡುವ ಕುರಿತಂತೆ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ ಎಂದರು.

ಭಂಡಾರಿ ಫೌಂಡೇಶನ್ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಕರ್ಣಂ ಉಮಾಮಹೇಶ್ವರ ರಾವ್ ಮುಖ್ಯ ಅತಿಥಿಯಾಗಿದ್ದರು.

## ಗ್ರ್ಯಾಂಡ್ ಚಾಲೆಂಜ್ ಪ್ರೋಗ್ರಾಂ

ಇನ್‌ಕ್ಯುಬೇಶನ್ ನೆಟ್‌ವರ್ಕ್ ಹೊರತು ಪಡಿಸಿ, ಗ್ರ್ಯಾಂಡ್ ಚಾಲೆಂಜ್ ಕಾರ್ಯಕ್ರಮದ ಮೂಲಕ ಅನ್ವೇಷಕರು, ಸ್ಟಾರ್ಟ್‌ಅಪ್, ಕಂಪೆನಿಗಳಿಂದ ಸಮಸ್ಯೆಗಳಿಗೆ ಪರಿಹಾರ ಕೇಳಲಾಗುತ್ತದೆ. ಸಮಸ್ಯೆಗಳನ್ನು ರೂಪಿಸಿ ಅದಕ್ಕೆ ಪರಿಹಾರವನ್ನು ಆಹ್ವಾನಿಸುವ ಈ ಕಾರ್ಯಕ್ರಮದ ಮೊದಲ ಹಂತದ ಮೌಲ್ಯಮಾಪನ ಕೆಲದಿನಗಳ ಹಿಂದೆ ನಡೆಸಲಾಗಿದೆ.

ನೋಬೆಲ್ ಪ್ರಶಸ್ತಿ ಪುರಸ್ಕೃತರಾದ ಅಡಾ ಇ.ಯೋನಥ್, ಸರ್ಜ್ ಹೆರೋಶ್, ಟ್ಯೂರಿಂಗ್ ಅವಾರ್ಡ್ ಪುರಸ್ಕೃತ ಜೋಸೆಫ್ ಸಿಫಾಕಿಸ್, ಕೆಎಸ್‌ಟಿಇಪಿಎಸ್ ಆಡಳಿತ ನಿರ್ದೇಶಕ ಡಾ.ಹೊನ್ನೇಗೌಡ ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಬೈರಪ್ಪ, ಪ್ರಾಂಶುಪಾಲ ಪ್ರೊ.ಯು.ಎಂ.ಭೂಷಿ, ನಿರ್ದೇಶಕ ಪ್ರೊ. ಡಿ.ಎಲ್. ಪ್ರಭಾಕರ್, ಬಾಲಕೃಷ್ಣ ಭಂಡಾರಿ, ದೇವರಾಜ್ ಹೆಗ್ಡೆ, ಜಗನ್ನಾಥ ಚೌಟ ಮೊದಲಾದವರು ಉಪಸ್ಥಿತರಿದ್ದರು.

ಮುಂಜಾನೆ ಮಾತು
ಅರಿಸಿಕೊಳ್ಳುವ ಅವಕಾಶಗಳಿದ್ದಾಗ ಒಳ್ಳೆಯದನ್ನೇ ಆರಿಸಿಕೊಳ್ಳೋಣ, ಅವಕಾಶಗಳಿಲ್ಲದಿದ್ದಾಗ ಸಿಕ್ಕಿದ್ದನ್ನೇ ಸರಿಯಾಗಿ ಬಳಸಿಕೊಳ್ಳೋಣ. ಆಯ್ಕೆ ಮತ್ತು ಅವಕಾಶಗಳಲ್ಲಿ ವಿವೇಚನೆ ಬಳಸೋಣ.

ವಿಜಯವಾಣಿ
ಕನ್ನಡಿಗರ ಧ್ವನಿ · 2018 ಹೊಸ ವರುಷ ತರಲಿ ಹರುಷ · No.1* ಕನ್ನಡ ದಿನಪತ್ರಿಕೆ

ಬೆಂಗಳೂರು · ಮಂಗಳೂರು · ಹುಬ್ಬಳ್ಳಿ · ವಿಜಯಪುರ · ಮೈಸೂರು · ಗಂಗಾವತಿ · ಚಿತ್ರದುರ್ಗ · ಶಿವಮೊಗ್ಗ · ಕಲಬುರಗಿ · ಬೆಳಗಾವಿ · VIJAYAVANI ● MANGALURU · ಮಂಗಳೂರು ● ಸಂಪುಟ 6 ● ಸಂಚಿಕೆ 283
vijayavani.net · ಇ-ಪೇಪರ್: epapervijayavani.in · VVani4U · @VVANI4U · vijayavaninews@gmail.com · ಸಹಾಯವಾಣಿ: 8884411682 · 11 ಜನವರಿ 2018 | ಗುರುವಾರ · 11 JANU

CENTRAL LIBRARY

# ದೇಹದಲ್ಲಿ ಪ್ರೊಟೀನ್ ಇಲ್ಲದಿದ್ದರೆ ಕಣ್ಣೀರೂ ಇಲ್ಲ!

## ಸಹ್ಯಾದ್ರಿ ಸಮಾವೇಶದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ.ಅಡಾ ಯೊನಾಥ್ ಉಪನ್ಯಾಸ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ರೈಬೋಸೋಮ್ ಪ್ರೊಟೀನ್ ತಯಾರಿಸುವ ಕಾರ್ಖಾನೆಗಳಿದ್ದಂತೆ, ಅವುಗಳು ವಂಶವಾಹಿಗಳಾದ ಜೀನ್‌ಗಳ ಮಾಹಿತಿಯನ್ನಾಧರಿಸಿ ಸತತವಾಗಿ ಪ್ರೊಟೀನ್‌ಗಳನ್ನು ಉತ್ಪಾದಿಸುತ್ತವೆ. ಇವುಗಳು ಪ್ರೊಟೀನ್ ತಯಾರಿಸದಿದ್ದರೆ ಕಣ್ಣಿಗೆ ಧೂಳು ಬಿದ್ದಾಗ ಕಣ್ಣೀರು ಬರುವುದೂ ನಿಂತು ಹೋಗುತ್ತದೆ ಎಂದು 2009ರಲ್ಲಿ ರಸಾಯನ ಶಾಸ್ತ್ರದ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಇಸ್ರೇಲ್‌ನ ಡಾ.ಅಡಾ ಇ. ಯೊನಾಥ್ ಹೇಳಿದರು.

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಆಯೋಜಿಸಲಾಗಿರುವ 5 ದಿನಗಳ ಸಹ್ಯಾದ್ರಿ ಸಮಾವೇಶದಲ್ಲಿ ಮಂಗಳವಾರ ತಮ್ಮ ಸಂಶೋಧನೆಯಾದ 'ರೈಬೋಸೋಮ್' ಕುರಿತು ಉಪನ್ಯಾಸ ನೀಡಿದರು.

ಜೀವಕೋಶಗಳಲ್ಲಿರುವ ರೈಬೋಸೋಮ್‌ಗಳು ಹಸಿವೆ, ತೀವ್ರ ಚಳಿ ಇತ್ಯಾದಿ ಒತ್ತಡದ ಅವಧಿಯಲ್ಲಿ ಶಿಸ್ತುಬದ್ಧವಾಗಿ ಕೋಶಗಳ ಒಳಭಾಗದಲ್ಲಿ ಮುದುಡಿ ಸೇರಿ ಸ್ಥಿರವಾಗಿರುತ್ತವೆ. ಎಕ್ಸ್‌ರೇಗಳಿಂದ ರೈಬೋಸೋಮ್‌ಗಳಿಗೆ ಹಾನಿಯಾಗುತ್ತದೆ, ಅದೇ ರೀತಿ ಆ್ಯಂಟಿ ಬಯೋಟಿಕ್ ಕೂಡ ಅವುಗಳನ್ನು ಘಾಸಿ ಮಾಡುತ್ತವೆ ಎಂದರು.


ವಿಜಯವಾಣಿ ಚಿತ್ರ

ಸಹ್ಯಾದ್ರಿ ಸಮಾವೇಶದಲ್ಲಿ ನೊಬೆಲ್ ವಿಜ್ಞಾನಿ ಡಾ. ಅಡಾ ಯೊನಾಥ್ ರೈಬೋಸೋಮ್ ಕುರಿತು ಉಪನ್ಯಾಸ ನೀಡಿದರು.

ರೈಬೋ ಸೋಮ್ ರಚನೆ ಮತ್ತು ಅವುಗಳ ಅಧ್ಯಯನ ನೊಬೆಲ್ ಪ್ರಶಸ್ತಿ ತಂದುಕೊಟ್ಟಿತು. ಈ ಕ್ಷೇತ್ರದಲ್ಲಿ ಸಂಶೋಧನೆಗೆ ಇನ್ನೂ ಅವಕಾಶಗಳಿವೆ. ರೈಬೋಸೋಮ್‌ಗಳಿಗೆ ಘಾಸಿ ಮಾಡದೇ, ಡಿಎನ್‌ಎಯ ಸೂಚನಾ ಭಾಷೆ ಅನುಸರಿಸಿ ಪ್ರೊಟೀನ್ ತಯಾರಿಸುವ ಅದರ ಕಾರ್ಯಕ್ಕೆ ಯಾವುದೇ ಅಡ್ಡಿ ಉಂಟುಮಾಡದೆ ಕಾಯಿಲೆಗಳಿಗೆ ಔಷಧ ತಯಾರಿಸುವ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

> ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಡಿ.ಪಿ.ಅಗರ್ವಾಲ್ ತ್ಯಾಜ್ಯ ನಿರ್ವಹಣೆ ಬಗ್ಗೆ ಉಪನ್ಯಾಸ ನೀಡಿದರು. ತ್ಯಾಜ್ಯ ನಿರ್ವಹಣೆ ಇಂದು ದೊಡ್ಡ ಸಮಸ್ಯೆಯಾಗುತ್ತಿರುವ ಬಗ್ಗೆ ಗಮನ ಸೆಳೆದ ಅವರು ಕೈಗಾರಿಕಾ ತ್ಯಾಜ್ಯ ನಿರ್ವಹಣೆಯನ್ನು ಸುರಕ್ಷಿತವಾಗಿ ನಿರ್ವಹಿಸದಿದ್ದರೆ ಅಪಾಯವಿದೆ ಎಂದರು.
> । ಡಾ. ಶಂಕರ ಕೆ. ಪ್ರಸಾದ್ ಸಮನ್ವಯಕಾರರಾಗಿದ್ದರು.

ಸಹ್ಯಾದ್ರಿ ವಿದ್ಯಾಸಂಸ್ಥೆಗಳು ಮತ್ತು ಸಹ್ಯಾದ್ರಿ ಪ್ರತಿಷ್ಠಾನ ಅಧ್ಯಕ್ಷರಾದ ಮಂಜುನಾಥ ಭಂಡಾರಿ ಮಾತನಾಡಿ, ನೊಬೆಲ್ ಪ್ರಶಸ್ತಿ ಪಡೆದವರನ್ನು ತಾವು ನೋಡುವಾಗ 45 ವರ್ಷ ಕಳೆದಿದ್ದವು. ಅವರ ಭಾಷಣಗಳು ವಿದ್ಯಾರ್ಥಿಗಳಿಗೆ ಪೂರ್ಣವಾಗಿ ಅರ್ಥವಾಗದಿದ್ದರೂ ಅವರ ಸಾಧನೆ ಪ್ರೇರಣೆಯಾಗಲಿ ಎಂದು ಕಿರಿಯ ವಯಸ್ಸಿನ ವಿದ್ಯಾರ್ಥಿಗಳಿಗೆ ಅವರನ್ನು ಭೇಟಿಯಾಗುವ, ಪ್ರಶ್ನೆ ಕೇಳುವ ಅವಕಾಶವನ್ನು ಈ ಮೂಲಕ ಒದಗಿಸಲಾಗಿದೆ ಎಂದರು.

## ಹಿಮಕರಡಿಯಲ್ಲಿ ರೈಬೋಸೋಮ್ ಕಾರ್ಯ

ಉತ್ತರ ಧ್ರುವದಲ್ಲಿ ವಾಸಿಸುವ ಬಿಳಿ ಕರಡಿಗಳು ಚಳಿಗಾಲದಲ್ಲಿ 6 ತಿಂಗಳು ದೀರ್ಘ ನಿದ್ರೆಗೆ ಹೋಗುತ್ತವೆ. ಈ ಅವಧಿಯಲ್ಲಿ ಅವುಗಳು ಆಹಾರ ಸೇವಿಸುವುದಿಲ್ಲ. ಆಗ ಅವುಗಳ ಜೀವಕೋಶಗಳ ರೈಬೋಸೋಮ್ ಕೋಶದ ಒಳಭಾಗದಲ್ಲಿ ಸೇರಿಕೊಂಡು ಹರಳುಗಟ್ಟುತ್ತವೆ ಮತ್ತು ಸ್ಥಿರವಾಗಿರುತ್ತವೆ. ಇಲ್ಲಿ ಆ ಪ್ರಾಣಿಗಳು ಅನುಭವಿಸುವ ಕಾಲಮಾನದ ಒತ್ತಡವಾದ ತೀವ್ರ ಚಳಿಯು ನಿಗದಿತ ಮತ್ತು ನಿಯಮಿತ ಅವಧಿಯಲ್ಲಿ ರೈಬೋಸೋಮ್ ಕೋಶದ ಒಳಭಾಗದಲ್ಲಿ ಸ್ಥಿರವಾಗಿ ಮುದುಡಿಕೊಂಡಿರುವಂತೆ ಮಾಡುತ್ತದೆ. ನಿದ್ದೆಯಿಂದೆದ್ದ ಬಳಿಕ ರೈಬೋಸೋಮ್ ಮತ್ತೆ ಕ್ರಿಯಾಶೀಲವಾಗಿ ಪ್ರೊಟೀನ್ ತಯಾರಿಸುತ್ತವೆ ಎಂದರು.

THE NEW INDIAN EXPRESS
MANGALURU • THURSDAY • JANUARY 11, 2018 • ₹5.00 • PAGES 16 • CITY EDITION

CENTRAL LIBRARY



# CURTAINS DOWN ON SAHYADRI CONCLAVE



Nobel Laureate Ad E Yonath and Gaurav Gupta from Department of IT, BT and Science and Technology along with NITK director Prof Uma Maheshwar Rao Karanam

MANGALURU: Nobel Laureate Ad E Yonath addressed the multitude of students at the end of the five-day Sahyadri Conclave of science, technology and management on Tuesday, and said the enthusiasm of students touched her. She urged students to get busy with Science and come up with fantastic new equipment.

Nobel Laureate Serge Haroche praised the curiosity of the students and said, "Students of Mangaluru have a deep quest for knowledge."

Turing Awardee Joseph Sifakis asked students to add meaning to their life and make it worth living with their achievements in the field of science.

Gaurav Gupta, Principal Secretary, Department of IT, BT and Science and Technology, Government of Karnataka highlighted initiatives of the Government of Karnataka to drive innovation and generate interest in science among female students.

He spoke about the incubation network centres set up in 20 colleges including Sahyadri College. "Students should be job creators rather than job seekers and focus on star-ups as a career," he said.

Prof Uma Maheshwar Rao Karanam, director, NITK, Surathkal advised students not to get disconnected with the society. "Start developing a hypothesis of any area of interest in science, evaluate it with experiments, analyse the results and communicate it to the society," he encouraged.

Prof K Byrappa, VC of Mangalore University also spoke on occasion.

## Incubation centre for budding entrepreneurs

MANGALURU: Gaurav Gupta, Principal Secretary to Government, Department of IT, BT and Science and Technology, Government of Karnataka, inaugurated New Age Incubation Network (NAIN) centre, a setup by the government of Karnataka for students to develop their scientific 'ideas' into a proper sellable 'products' at Sahyadri College of Engineering and Management, on Wednesday.

The centre will help students by providing them necessary infrastructure and mentors, to build a business model, encouraging the entrepreneurial spirit.

Students are selected through pre-ideation, an intercollegiate science talent hunt programme by NAIN, where 15 papers will be shortlisted and sent to the government. The state government will scrutinise the papers and select socially relevant and impactful projects. The selected students will receive a grant of Rs 3 lac for a year along with the necessary infrastructure and mentoring to transform their ideas into a proper products.

In a year, the students have to transform ideas into Proof of Concept (feasibility of an idea). "NAIN will do some handholding for the commercialisation after POC. We will hold seminars introduce students to the VPs and private investors to showcase product to funders," Rajesh Naidu said.

The incubation centre helps get the right contacts to help the students grow their products and services, he added.

Nobel laureates Ada E Yonath and Serge Haroche were present.

THE NEW
INDIAN
EXPRESS
MANGALURU • THURSDAY • JANUARY 11, 2018 • ₹5.00 • PAGES 16 • CITY EDITION

CENTRAL LIBRARY



# Nobel laureate vouches for women in education, work

**EXPRESS NEWS SERVICE** @ Mangaluru

"WOMEN should be encouraged to achieve academic and professional success," said Noble Laureate Prof Ada E Yonath, addressing faculty and students at NITK Surathkal on Wednesday.

She and Prof Serge Haroche from France inaugurated the Golden Jubilee Block of Chemical Engineering and Vertical extension of Applied Mechanics Department. "It is possible to achieve excellence as long one is passionate," she said.

Prof Haroche said, any country in the world should give top priority to improve the quality of education

Prof Karanam Umamaheswar Rao presided over the function. He said all the study should consider the Noble Laureates as role models to achieve excellence in research and innovation.

ಬುಧವಾರ,10 ಜನವರಿ 2018 | ಪುಟಗಳು: 14+4+4(U6) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 165
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರ



ಗಾಂಧಿ ತತ್ವ, ಭಾರತೀಯ ಮೌಲ್ಯಗಳ ಮೂಲಕವೇ ಉಗ್ರವಾದ, ಮೂಲಭೂತವಾದಕ್ಕೆ ಉತ್ತರ: ಮೋದಿ

ಮದರಸಾಗಳಲ್ಲಿ ಹುಟ್ಟುವುದು ಡಾಕ್ಟರ್, ಎಂಜಿನಿಯರ್‌ಗಳಲ್ಲ, ಭಯೋತ್ಪಾದಕರು ಮಾತ್ರ : ಶಿಯಾ ಮಂಡಳಿ ಅಧ್ಯಕ್ಷ ಹೇಳಿಕೆ P10



ಡೋಪಿಂಗ್ ನಿಯಮ ಉಲ್ಲಂಘನೆ ಆರೋ
ಯೂಸುಫ್ ಪಠಾಣ್ 5 ತಿಂಗಳು ಅಮಾನ


# ಪ್ರೋಟೀನ್ ಇಲ್ಲದಿದ್ದರೆ ಕಣ್ಣೀರೂ ಇಲ್ಲ

## ಸಹ್ಯಾದ್ರಿ ಸಮಾವೇಶದಲ್ಲಿ ರೈಬೋಸೋಮುಗಳ ವಿಷಯದಲ್ಲಿ ಉಪನ್ಯಾಸದಲ್ಲಿ ಡಾ.ಅಡಾ ಯೊನಾಥ್

**ಮಂಗಳೂರು:** ಜೀವಕೋಶಗಳಲ್ಲಿರುವ ರೈಬೋಸೋಮುಗಳು ಹಸಿವೆ, ತೀವ್ರ ಚಳಿ ಇತ್ಯಾದಿ ಒತ್ತಡದ ಅವಧಿಯಲ್ಲಿ ಶಿಸ್ತುಬದ್ಧವಾಗಿ ಕೋಶಗಳ ಒಳಭಾಗದಲ್ಲಿ ಮುದುಡಿ ಸೇರಿಕೊಂಡು ಸ್ಥಿರವಾಗಿರುತ್ತವೆ ಎಂದು 2009ನೇ ಸಾಲಿನಲ್ಲಿ ರಸಾಯನ ಶಾಸ್ತ್ರದ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಇಸ್ರೇಲಿನ ಡಾ.ಅಡಾ ಇ. ಯೊನಾಥ್ ಹೇಳಿದರು.

ಅಡ್ಯಾರಿನ ಸಹ್ಯಾದ್ರಿ ಕಾಲೇಜಿನಲ್ಲಿ ಐದು ದಿನಗಳ 'ಸಹ್ಯಾದ್ರಿ ಸಮಾವೇಶ'ದಲ್ಲಿ ಮಂಗಳವಾರ ತಮ್ಮ ಸಂಶೋಧನೆಯಾದ ರೈಬೋಸೋಮುಗಳ ಕುರಿತಂತೆ ಅವರು ಉಪನ್ಯಾಸ ನೀಡಿದರು.

ಎಕ್ಸ್‌ರೇಗಳಿಂದ ರೈಬೋಸೋಮುಗಳಿಗೆ ಹಾನಿಯಾಗುತ್ತದೆ. ಅದೇ ರೀತಿ ಆಂಟಿ ಬಯೋಟಿಕ್‌ಗಳೂ ಅವುಗಳನ್ನು ಘಾಸಿ



ಮಾಡುತ್ತವೆ ಎಂದರು.

ಸ್ಕೂಟರ್ ಅಪಘಾತ ಮೂಡಿಸಿದ ಆಸಕ್ತಿ: ಸ್ಕೂಟರ್ ಅಪಘಾತದಲ್ಲಿ ಬಿದ್ದು ತನ್ನ ತಲೆಗೆ ಪೆಟ್ಟಾಯಿತು. ಆ ಕಾಲದಲ್ಲಿ ಹೆಲ್ಮೆಟ್ ಇರಲಿಲ್ಲ, ಇದರಿಂದಾಗಿ ತಾವು ಹಲವು ತಿಂಗಳ ಕಾಲ ಮನೆಯಲ್ಲಿ ಉಳಿಯಬೇಕಾಯಿತು. ಆ ಸಂದರ್ಭದಲ್ಲಿ ಉತ್ತರ ಧ್ರುವದ ಬಿಳಿ ಕರಡಿಗಳ ಕುರಿತಂತೆ ಓದಿದೆ. ಅಲ್ಲಿಯವರೆಗೂ ನನಗೆ ಅವುಗಳ ಬಗ್ಗೆ ಆಸಕ್ತಿ ಇರಲಿಲ್ಲ, ಬಳಿಕ ಆರೋಗ್ಯ ಸರಿಯಾದ ನಂತರ ಈ ಕರಡಿಗಳು ಆರು ತಿಂಗಳು ಕಾಲ ಆಹಾರವಿಲ್ಲದೆ, ಪ್ರೊಟೀನುಗಳ ತಯಾರಿಕೆಯನ್ನು ಹೇಗೆ ಸ್ಥಗಿತಗೊಳಿಸುತ್ತವೆ ಎಂಬ ನಿಟ್ಟಿನಲ್ಲಿ ಸಂಶೋಧನೆ ಕೈಗೆತ್ತಿಕೊಂಡೆ ಎಂದ ಡಾ.ಅಡಾ, ತಾವು ಬಿಳಿ ಕರಡಿಗಳ ಕುರಿತು ಮಾಹಿತಿ ಸಂಗ್ರಹಕ್ಕೆ ಕಾರಣವಾದ ಘಟನೆಯನ್ನು ಸ್ಮರಿಸಿಕೊಂಡರು. ನನಗೆ ಪ್ರೊಟೀನ್ ತಯಾರಿಕೆಗೆ ಸಂಬಂಧಿಸಿದ ಜೆನೆಟಿಕ್ ಸಂಕೇತಗಳು ಬಹಳ ಆಸಕ್ತಿ ಮೂಡಿಸಿದ್ದವು. ಇದಕ್ಕಾಗಿ ವಿವಿಧ ದೇಶಗಳ ವಿವಿಧ ವಿಶ್ವವಿದ್ಯಾಲಯಗಳಿಗೆ ತೆರಳಿ ಸಂಶೋಧನಾ ಅಧ್ಯಯನ ಕೈಗೊಂಡೆ ಎಂದು ಅವರು ನುಡಿದರು.

**ಅಪೂರ್ವ ಅವಕಾಶ:** ಸಮಾವೇಶದ ಆಯೋಜಕ ಸಂಸ್ಥೆಗಳಲ್ಲಿ ಒಂದಾದ ಸಹ್ಯಾದ್ರಿ ವಿದ್ಯಾಸಂಸ್ಥೆಗಳು ಮತ್ತು ಸಹ್ಯಾದ್ರಿ ಪ್ರತಿಷ್ಠಾನದ ಅಧ್ಯಕ್ಷ ಮಂಜುನಾಥ ಭಂಡಾರಿ ಮಾತನಾಡಿ, ನೋಬೆಲ್ ಪ್ರಶಸ್ತಿ ಪಡೆದವರನ್ನು ತಾವು ನೋಡುವಾಗ 45 ವರ್ಷಗಳು ಕಳೆದಿದ್ದವು. ಅವರ ಭಾಷಣಗಳು ವಿದ್ಯಾರ್ಥಿಗಳಿಗೆ ಪೂರ್ಣವಾಗಿ ಅರ್ಥವಾಗದಿದ್ದರೂ ಅವರ ಸಾಧನೆ ಪ್ರೇರಣೆಯಾಗಲಿ ಎಂದರು.

ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಡಿ.ಪಿ. ಅಗರ್ವಾಲ್ ತ್ಯಾಜ್ಯ ನಿರ್ವಹಣೆ ಬಗ್ಗೆ ಉಪನ್ಯಾಸ ನೀಡಿದರು. ತ್ಯಾಜ್ಯ ನಿರ್ವಹಣೆ ಇಂದು ದೊಡ್ಡ ಸಮಸ್ಯೆಯಾಗುತ್ತಿರುವ ಬಗ್ಗೆ ಗಮನ ಸೆಳೆದ ಅವರು ಕೈಗಾರಿಕಾ ತ್ಯಾಜ್ಯ ನಿರ್ವಹಣೆಯನ್ನು ಸುರಕ್ಷಿತವಾಗಿ ನಿರ್ವಹಿಸದಿದ್ದರೆ ಅಪಾಯವಿದೆ ಎಂದರು. ಡಾ. ಶಂಕರ ಕೆ. ಪ್ರಸಾದ್ ಸಮನ್ವಯಕಾರರಾಗಿದ್ದರು.